# ಬೃಹಚ್ಚರಣ

ತ್ರೈಮಾಸಿಕ ವಾರ್ತಾ ಪತ್ರಿಕೆ

ಸಂಪುಟ : 8 ಸಂಚಿಕೆ : 2 ಖಾಸಗಿ ಪ್ರಸಾರಕ್ಕಾಗಿ ಏಪ್ರಿಲ್–ಜೂನ್ 2018

## 2017-18ರ ಸಂಘದ ಸರ್ವ ಸದಸ್ಯರ ಸಭೆ ದಿನಾಂಕ 22.07.2018

### ಅಧ್ಯಕ್ಷರ ನುಡಿ

ಆತ್ಮೀಯರೇ ನಮಸ್ಕಾರ,

ನಾವು ಆಚರಿಸುವ ಎಲ್ಲ ಹಬ್ಬಗಳಿಗೆ ಸಂಘದ ಪರವಾಗಿ ಸದಸ್ಯರ ಕುಟುಂಬಗಳಿಗೆ ಸಂಘದ ಪರವಾಗಿ ಶುಭ ಕೋರುತ್ತೇನೆ.

ಸಂಘಕ್ಕೆ ಸದಸ್ಯರು ವಾರ್ಷಿಕ ನಿರ್ವಹಣಾ ವೆಚ್ಚವನ್ನು ಸತತವಾಗಿ ಸ್ವ-ಇಚ್ಛೆಯಿಂದ ನೀಡುತ್ತಿರುವವರಿಗೆಲ್ಲ ಧನ್ಯವಾದಗಳು. ನಿರ್ವಹಣಾ ವೆಚ್ಚವನ್ನು ನೀಡಬೇಕಾಗಿರುವವರು ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸಿ, ತಮ್ಮ ದೇಣಿಗೆಯನ್ನು ನೀಡುವುದಲ್ಲದೆ ಅನ್ನ ಸಂತರ್ಪಣೆ, ವಿದ್ಯಾನಿಧಿ ಹಾಗೂ ಸಂಘ ಹಮ್ಮಿಕೊಳ್ಳುತ್ತಿರುವ 'ಹಿರಿಯ ಚೇತನರ ಸನ್ಮಾನ, ಪ್ರತಿಭಾ ವಿದ್ಯಾರ್ಥಿ'ಗಳಿಗೆ ನೀಡುವ ಪ್ರಶಸ್ತಿ ಕಾರ್ಯಕ್ರಮಗಳಿಗೆ ಪ್ರಾಯೋಜಕರಾಗಿರಬೇಕೆಂದು ಕಾರ್ಯಕಾರಿ ಸಮಿತಿಯ ಅನಿಸಿಕೆಯನ್ನು ತಿಳಿಸಬಯಸುತ್ತೇನೆ. ಮುಂಬರುವ ಸರ್ವ ಸದಸ್ಯರ ಸಭೆಗೆ ತಮ್ಮೆಲ್ಲರನ್ನು ಆತ್ಮೀಯತೆಯಿಂದ ಸ್ವಾಗತಿಸುತ್ತೇನೆ.

**ಸೋಮಸುಂದರ**
ಸಂಘದ ಅಧ್ಯಕ್ಷರು

### ಸಂಪಾದಕೀಯ

ಸಂಘದ ಅಧ್ಯಕ್ಷ ಶ್ರೀ ಸೋಮಸುಂದರ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರ ಪೂರ್ಣ ಸಹಕಾರದಿಂದ – ಬೆಂಬಲದಿಂದ ಹೊರಬರುತ್ತಿರುವ 'ಬೃಹಚ್ಚರಣ' ತ್ರೈಮಾಸಿಕ ವಾರ್ತಾ ಪತ್ರಿಕೆಯ 28 ಸಂಚಿಕೆಗಳು ಹೊರಬಂದಿದೆ ಎಂದು ಸಂತೋಷದಿಂದ ತಿಳಿಸಬಯಸುತ್ತೇನೆ.

ಸಂಘದ ಕಾರ್ಯಕಾರಿಣಿ ಸಮಿತಿ ಸದಸ್ಯರ ಅಭಿಪ್ರಾಯದಂತೆ 'ಬೃಹಚ್ಚರಣ' ಪತ್ರಿಕೆಗೆ ತಗಲುವ ವೆಚ್ಚವನ್ನು ತಗ್ಗಿಸುವ ದೃಷ್ಟಿಯಿಂದ ಪತ್ರಿಕೆಯು ಹೊಸ ವಿನ್ಯಾಸದಿಂದ ಬರುತ್ತಿದೆ.

**ಕೆ.ಸಿ. ನಟರಾಜ್**
ಸಂಪಾದಕ

**ಸದಸ್ಯರ ಅವಗಾಹನೆಗಾಗಿ:**

**2017–18 ಸಾಲಿನ ಸರ್ವ ಸದಸ್ಯರ ಸಭೆಯು ತಾರೀಖು 22.07.2018ನೇ ಭಾನುವಾರದಂದು** 'ಭ್ರಮರಾಂಭ ಮಂಗಳ ಸದನ' ಮಲ್ಲಿಕಾರ್ಜುನ ದೇವಾಲಯದ ಆವರಣದಲ್ಲಿ ಏರ್ಪಡಿಸಲಾಗಿದೆ.

ಎಂದಿನಂತೆ ಹಿರಿಯ ಚೇತನರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಸಹಾ ಹಮ್ಮಿಕೊಳ್ಳಲಾಗಿದೆ.

ಇದರ ಜೊತೆಗೆ 2018–2021ಸಾಲಿಗೆ ನೂತನ ಕಾರ್ಯಕಾರಿ ಸಮಿತಿಯ ಆಯ್ಕೆ/ಚುನಾವಣೆ ನಡೆಯಬೇಕಿದೆ.

ನಮ್ಮ ಸಮುದಾಯದ ಯುವ ಸದಸ್ಯರು ಕಾರ್ಯಕಾರಿ ಸಮಿತಿಗೆ ಸೇರ್ಪಡೆಯಾಗಿ, ಆಸಕ್ತಿ ವಹಿಸಿ ಸಂಘದ ಅಭಿವೃದ್ಧಿಗಾಗಿ ಶ್ರಮಿಸಲು ಮನವಿ.

ಹೆಚ್ಚಿನ ವಿವರಗಳನ್ನು ಪತ್ರಿಕೆಯ ಒಳ ಪುಟಗಳಲ್ಲಿ ಲಗತ್ತಿಸಲಾಗಿದೆ.

ಸಮುದಾಯದ ಎಲ್ಲ ಸದಸ್ಯರು ಕುಟುಂಬ ಸಮೇತರಾಗಿ ಸರ್ವ ಸದಸ್ಯರ ಸಭೆಗೆ ಹಾಜರಾಗಲು ವಿನಂತಿ.

**ವಿ.ಎಸ್.ಮಣಿ**
ಕಾರ್ಯದರ್ಶಿ



ಶಂಕರ ಜಯಂತಿಯಂದು ಸಂಗೀತ ಕಲಾವಿದರೊಂದಿಗೆ ಸಂಘದ ಪದಾಧಿಕಾರಿಗಳು

# ಶಂಕರ ಜಯಂತಿ ಪ್ರಯುಕ್ತ ನಡೆದ ಸಂಗೀತ ಕಾರ್ಯಕ್ರಮದ ಛಾಯಾಚಿತ್ರಗಳು

–ಶಿವಕುಮಾರ್ ಎನ್.





















# ಶಂಕರ ಜಯಂತಿ



ಆದಿಗುರು ಶ್ರೀ ಶಂಕರಾಚಾರ್ಯರ ಜಯಂತಿ ಪ್ರಯುಕ್ತವಾಗಿ ದಿನಾಂಕ 20-04-2018ರ ಶುಕ್ರವಾರದಂದು ಬೆಂಗಳೂರಿನ ಬಸವನಗುಡಿಯ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಆವರಣದಲ್ಲಿ ಬೃಹಚ್ಚರಣ ಸಮುದಾಯದವರು ಸಂಗೀತ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಮಳೆಯ ಕಾರಣದಿಂದ ಕಾರ್ಯಕ್ರಮದ ಪ್ರಾರಂಭಕ್ಕೆ ತಡೆಯಾದರೂ ದೇವಾಲಯದ ಆಡಳಿತ ಮಂಡಳಿಯವರಾದ ಶ್ರೀ ಶಿವಕುಮಾರ್ ಮತ್ತು ನಮ್ಮ ಸಂಘದ ಉಪಾಧ್ಯಕ್ಷರಾದ ಶ್ರೀ ಶಶಿಧರ್, ಕಾರ್ಯದರ್ಶಿ ಶ್ರೀ ವಿ.ಎಸ್. ಮಣಿ, ಖಜಾಂಜಿ ಎಸ್. ಸತ್ಯನಾರಾಯಣ ಮತ್ತು ಇತರೆ ಕಾರ್ಯಕಾರಿ ಸಮಿತಿ ಸದಸ್ಯರು ಸಮಯೋಚಿತ ಸ್ಥಳ ಬದಲಾವಣೆ ಮಾಡಿದ್ದರಿಂದ ಕಾರ್ಯಕ್ರಮವು ಸುಗಮವಾಗಿ ನಡೆಯಲು ಸಹಕಾರಿಯಾಯಿತು.

ಸಂಘದ ಸದಸ್ಯರಾದ ಶ್ರೀ ಹೆಚ್.ಪಿ. ಶ್ರೀನಿವಾಸ್ ಮತ್ತು ಶ್ರೀಮತಿ ಸರ್ವಮಂಗಳಾ ಶ್ರೀನಿವಾಸ್‌ರವರ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಮುಂದೆ ಚಿ. ಪ್ರಣವ್ ಮುರಳಿಯವರು ಹಾಡಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಯುತ ಬಿ.ಎನ್.ಜಿ. ಪ್ರಸಾದ್‌ರವರು ಮತ್ತು ಕಿರಿಯ ಕಲಾವಿದ ಚಿ. ಅರ್ಜುನರವರು ಭಕ್ತಿಗೀತೆಗಳನ್ನು ಪ್ರಸ್ತುತಪಡಿಸಿದರು. ಬಾಲಕಲಾವಿದರಾದ ಚಿ. ಪ್ರಿಯಾ ಮತ್ತು ಚಿ. ಸಮಾಹಿತರವರು ಹಾಡುಗಳನ್ನು ಹಾಡಿ ಪ್ರೇಕ್ಷಕರನ್ನು ರಂಜಿಸಿ, ಪ್ರೇಕ್ಷಕರ ಮೆಚ್ಚುಗೆ ಗಳಿಸಿದರು.

ಇದಾದ ಮೇಲೆ ಸಂಗೀತ ವಿದೂಷಿ ಶ್ರೀಮತಿ ಸರಸ್ವತಿ ನಟರಾಜನ್‌ರವರ ನೇತೃತ್ವದಲ್ಲಿ ಶುಭಾ ಗಾಯತ್ರಿ, ಛಾಯಾಭಗವಾನ್, ಗಾಯತ್ರಿ ಶೇಷಾಚಲ, ಲಲಿತಾ ರಮೇಶ್, ರಾಧಾ ವೆಂಕಟೇಶ್, ಪೂರ್ಣಿಮಾ ಗೋಪಾಲಕೃಷ್ಣ, ರೂಪಾ ಶ್ರೀಧರ್, ಮಮತಾ ಶಿವಕುಮಾರ್, ಅಶ್ವಿನಿ ವೆಂಕಟೇಶ್, ವಾಣಿಶ್ರೀ ರಾಮಕೃಷ್ಣ, ಮನೋಜ್ಞ, ಸುಪ್ರೀತಾರವರು ಸಮೂಹ ಗಾಯನದಲ್ಲಿ ಶ್ರೀ ಶಂಕರರ ಹಾಗೂ ದೇವತಾಸ್ತುತಿಗಳನ್ನು ಹಾಡಿದರು.

ನಮ್ಮ ಸಮುದಾಯದ ಹಿರಿಯ ಕಲಾವಿದರಾದ ಮಂಡ್ಯದ ಲಯವಾದ್ಯ ವಿದ್ವಾನ್ ಸುದರ್ಶನ್ ಸುಬ್ಬರಾವ್, ವಿದ್ವಾನ್ ರವಿಶಂಕರ್ ಮತ್ತು ವಿದ್ವಾನ್ ಆನೇಕಲ್ ವಾಸುರವರೊಂದಿಗೆ ಕೀಬೋರ್ಡ್‌ನಲ್ಲಿ ಚಿ. ಶ್ರೇಯಸ್ ನಾಗೇಶ್ ಪಕ್ಕವಾದ್ಯದಲ್ಲಿ ಸಹಕರಿಸಿದರು.

ಕಾರ್ಯಕ್ರಮವು ಶ್ರೀಶಂಕರ ಸೇವಾ ಸಮಿತಿಯ ಕಾರ್ಯದರ್ಶಿಯವರು ಕಲಾವಿದರನ್ನು ಸ್ವಾಗತಿಸುವುದರೊಂದಿಗೆ ಪ್ರಾರಂಭವಾಯಿತು. ನಂತರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಬಿ. ಸುಬ್ರಹ್ಮಣ್ಯಂರವರು ನೆರೆದ ಸಂಗೀತಾಭಿಮಾನಿಗಳನ್ನು ಆದರದಿಂದ ಸ್ವಾಗತಿಸಿದರು. ಸಂಘದ ಪೋಷಕರಾದ ಆರ್. ರಮೇಶ್‌ರವರು ಕಾರ್ಯಕ್ರಮ ನಿರೂಪಣೆ ಮಾಡಿದರು. ಶ್ರೀ ಶಂಕರ ಸೇವಾ ಸಮಿತಿಯವರು ಏರ್ಪಡಿಸಿದ ಜಗದ್ಗುರು ಶ್ರೀ ಶಂಕರಾಚಾರ್ಯರ ಉತ್ಸವ ವಿಜೃಂಭಣೆಯಿಂದ ನಡೆಯಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ಕಲಾವಿದರಿಗೂ ಸಂಘದ ವತಿಯಿಂದ ಶ್ರೀಚಕ್ರ ಚಿತ್ರವನ್ನೊಳಗೊಂಡ ನೆನಪಿನ ಕಾಣಿಕೆಯನ್ನು ನೀಡಿ ಪುರಸ್ಕರಿಸಲಾಯಿತು. ಶ್ರೀ ಶಂಕರ ಸೇವಾ ಸಮಿತಿಯ ಆಡಳಿತ ಮಂಡಳಿಯವರಿಗೆ ಬೃಹಚ್ಚರಣ ಸಂಘದ ಉಪಾಧ್ಯಕ್ಷರಾದ ಶ್ರೀ ಶಶಿಧರ್, ಕಾರ್ಯದರ್ಶಿ ವಿ.ಎಸ್. ಮಣಿ, ಸಹಕಾರ್ಯದರ್ಶಿ ಅರುಣ ವೆಂಕಟಾಚಲಯ್ಯ, ಖಜಾಂಚಿ ಎಸ್. ಸತ್ಯನಾರಾಯಣ್‌ರವರು ಮತ್ತು ಇತರ ಕಾರ್ಯಕಾರಿ ಸಮಿತಿ ಸದಸ್ಯರು ಸನ್ಮಾನಿಸಿದರು. ವಂದನಾರ್ಪಣೆಯ ನಂತರ ಪ್ರಸಾದ ವ್ಯವಸ್ಥೆ ಏರ್ಪಡಿಸಲಾಗಿತ್ತು. ಸಂಘದ ಅಧ್ಯಕ್ಷರಾದ ಶ್ರೀ ಸೋಮಸುಂದರರವರು ಕಾರಣಾಂತರಗಳಿಂದ ಉಪಸ್ಥಿತರಾಗಿಲ್ಲದಿದ್ದರೂ ಕಾರ್ಯಕ್ರಮ ಸುಸೂತ್ರವಾಗಿ ನಡೆಯಲು ಮಾರ್ಗದರ್ಶನ ನೀಡಿದ್ದರು.



**ಲಲಿತಾ ರಮೇಶ್**
9945199637

## ಮೈ.ಮಂ.ದ್ರಾ.ಬೃಹಚ್ಚರಣ ಸಂಘದ ಕಾರ್ಯಕಾರಿ ಸಮಿತಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ**

**ಕಾರ್ಯಕಾರಿ ಸಮಿತಿ : 2015–2018**

ಶ್ರೀಯುತರಾದ

**ಅಧ್ಯಕ್ಷರು**

ಎಸ್. ಸೋಮಸುಂದರ, 9900113298

**ಉಪಾಧ್ಯಕ್ಷರು**

ಎಚ್.ಕೆ. ಶಶಿಧರ್, 9845173766

**ಕಾರ್ಯದರ್ಶಿ**

ವಿ.ಎಸ್. ಮಣಿ, 9845055582

**ಸಹಕಾರ್ಯದರ್ಶಿ**

ಅರುಣ್ ವಿ., 9880166001

**ಖಜಾಂಚಿ**

ಎಸ್. ಸತ್ಯನಾರಾಯಣ, 9980945699

**ಲೆಕ್ಕಪರಿಶೋಧಕರು**

ಎಸ್.ಸಿ. ಶ್ರೀನಿವಾಸ, 9845376949

**ಗೌರವ ಸದಸ್ಯರು**

ಮಂಜುನಾರಾಯಣ್ ಕೆ. 9886114279
ಟಿ.ಎಸ್. ಮಣಿ, 9845176335
ಟಿ.ಎಸ್. ರಮೇಶನ್, 9663874531
ಟಿ.ಪಿ.ಸೂರ್ಯನಾರಾಯಣ, 9945484268
ಸರಸ್ವತಿ ನಟರಾಜನ್, 9480619730
ಕೆ.ಜಿ. ವೆಂಕಟೇಶ್, 9964012687
ಆರ್. ಗಣೇಶ್ ಶ್ರೀಧರ್, 9880187686
ಟಿ. ನಾಗೇಶ್, 9980662118
ಬಿ.ಎನ್.ಜಿ. ಪ್ರಸಾದ್, 9845128229
ಸುಬ್ರಹ್ಮಣ್ಯಂ ಬೆಂಗಳೂರು, 9449869667
ಕೆ.ಬಿ.ಎಸ್. ಶರ್ಮ, 94820 87344
ಅನಂತ ಕೆ.ಎಸ್. 97404 44222
ಶಂಕರಪ್ರಸಾದ್ ಬಿ.ಆರ್., 9845663833
ಕೆ. ಗುಂಡಪ್ಪ, 9845332315
ಟಿ.ಎನ್. ರವಿಕಿರಣ್, 9972677005
ಸುನಿಲ್‌ವಿಜಯ್‌ಕುಮಾರ್, 9986953605

ಕೆ.ಸಿ. ನಟರಾಜ್, 9845113475
**ಸಂಪಾದಕ, ಬೃಹಚ್ಚರಣ ಪತ್ರಿಕೆ**

ಲಲಿತಾ ರಮೇಶ್, **ಉಪಸಂಪಾದಕಿ**
9945199637

## 2018–21ನೇ ಸಾಲಿಗೆ ಕಾರ್ಯಕಾರಿ ಸಮಿತಿ ಸದಸ್ಯರ ಚುನಾವಣೆಗೆ ವೇಳಾಪಟ್ಟಿ

1. ನಾಮಪತ್ರಗಳನ್ನು ಸ್ವೀಕರಿಸಲು ಕಡೆಯ ದಿನಾಂಕ 15–07–2018

2. ನಾಮಕರಣಗೊಂಡ ಸ್ಪರ್ಧಿಗಳ ಹೆಸರುಗಳನ್ನು ಘೋಷಿಸಲು ಕಡೆಯ ದಿನಾಂಕ – 16–07–2018

3. ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲು ಕಡೆಯ ದಿನಾಂಕ – 17–07–2018

4. ಸ್ಪರ್ಧಿಗಳ ಅಂತಿಮ ಪಟ್ಟಿಯನ್ನು ಘೋಷಿಸಲು ಕಡೆಯದಿನಾಂಕ–18–07–2017

5. ನೂತನ ಸಮಿತಿಗೆ ಚುನಾವಣೆ – 22–07–2018

ಸೂಕ್ತ ರೀತಿಯಲ್ಲಿ ಭರ್ತಿ ಮಾಡಲ್ಪಟ್ಟ ನಾಮ ಪತ್ರಗಳನ್ನು ಕೆಳಕಂಡ ವಿಳಾಸಕ್ಕೆ ರಿಜಿಸ್ಟರ್ಡ್ ಅಂಚೆ, ಸ್ಪೀಡ್ ಪೋಸ್ಟ್ ಮೂಲಕ ಅಥವಾ ವೈಯುಕ್ತಿಕವಾಗಿ 10–07–2018 ರಂದು 5.00 ಘಂಟೆಯೊಳಗಾಗಿ ತಲುಪಿಸಬೇಕು.

**ಶ್ರೀ ಬಿ.ಎನ್.ಜಿ. ಗೋವಿಂದಪ್ರಸಾದ್**
# 305,6th Main Road, HAL 2nd Stage
Indiranagar, Bengaluru 560 038
e-mail: Prasad@bngassociates.co.in

ಸ್ಪರ್ಧಿಗಳ ಅಂತಿಮ ಪಟ್ಟಿಯನ್ನು ಸಂಘದ ನೋಂದಾಯಿತ ವಿಳಾಸದಲ್ಲಿ ಪ್ರಕಟಿಸಲಾಗುವುದು ಮತ್ತು ಸ್ಪರ್ಧಿಗಳಿಗೆ ಇ–ಮೇಲ್ ಮೂಲಕ ಕಳುಹಿಸಲಾಗುವುದು.

ಬೆಂಗಳೂರು ಕಾರ್ಯದರ್ಶಿಗಳು
ದಿನಾಂಕ: 22–06–2018

## ಉಪನಯನ

ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಟಿ.ಎನ್. ರವಿಕಿರಣ್ ಶ್ರೀಮತಿ ಭವಾನಿ ರವಿಕಿರಣ್‌ರವರ ಪುತ್ರ **ಚಿ॥ ಮಿಲಿಂದ್‌ಕಶ್ಯಪ್** ರವರ ಉಪನಯನವು ತಾ॥ 22–04–2018ರಂದು ರಾಜರಾಜೇಶ್ವರಿನಗರದ ಸ್ವಗೃಹದಲ್ಲಿ ನೆರವೇರಿತು.

**ಸಂಘವು ವಟುವಿಗೆ ಶುಭ ಹಾರೈಸುತ್ತದೆ**

# "ಸರ್ವ ಸದಸ್ಯರ ಸಭೆ–2017–18"

ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘದ 2017–18ನೇ ವಾರ್ಷಿಕ ಸರ್ವ ಸದಸ್ಯರ ಸಭೆಯು ಶ್ರೀ ಭ್ರಮರಾಂಬ ಸದನದಲ್ಲಿ (ಶ್ರೀ ಮಲ್ಲಿಕಾರ್ಜುನ ದೇವಸ್ಥಾನ ಆವರಣ, ಎ.ಪಿ.ಎಸ್. ಕಾಲೇಜ್ ಹತ್ತಿರ, ಬಸವನಗುಡಿ, ಬೆಂಗಳೂರು–560 004), ಭಾನುವಾರ, ದಿನಾಂಕ 22–07–2018 ರಂದು ಬೆಳಿಗ್ಗೆ 10.00 ಗಂಟೆಗೆ ನಡೆಯಲಿದ್ದು ತಾವುಗಳೆಲ್ಲಾ ಭಾಗವಹಿಸಬೇಕೆಂದು ಕೋರಿದೆ.

**ಕಾರ್ಯಕ್ರಮ ವಿವರ:**

- ಸದಸ್ಯರ ಹಾಜರಾತಿ ಹಾಗೂ ನೋಂದಣಿ
- ಪ್ರಾರ್ಥನೆ
- ಪ್ರಾಸ್ತಾವಿಕ ನುಡಿ
- 2017–18ನೇ ಸಾಲಿನ ವಾರ್ಷಿಕ ವರದಿ ಮಂಡನೆ
- 2017–18ರ ಆಯವ್ಯಯ ಪತ್ರ ಮಂಡನೆ – ಅಂಗೀಕಾರ
- 2018–21ನೇ ಅವಧಿಗೆ ಕಾರ್ಯಕಾರಿ ಸಮಿತಿಗೆ ಚುನಾವಣೆ (ಚುನಾವಣಾ ವೇಳಾಪಟ್ಟಿ, ನಾಮಿನೇಷನ್ ಫಾರಂ ಮತ್ತು ವಿತ್‌ಡ್ರಾಅಲ್ ಫಾರಂಗಳನ್ನು ಲಗತ್ತಿಸಲಾಗಿದೆ)
- ಸದಸ್ಯರ ಸಲಹೆ/ಸೂಚನೆ
- ಅಧ್ಯಕ್ಷರ ನುಡಿ
- "ಹಿರಿಯ ಚೇತನಗಳಿಗೆ" ಸನ್ಮಾನ
- "ಪ್ರತಿಭಾ ಪುರಸ್ಕಾರ"
- ವಂದನಾರ್ಪಣೆ

ಭೋಜನ : ಮಧ್ಯಾಹ್ನ 1.00 ಗಂಟೆಗೆ.

- 2017–18ನೇ ಆಯವ್ಯಯದ ಪತ್ರದ ಬಗ್ಗೆ ಚರ್ಚಿಸಬೇಕಿದ್ದಲ್ಲಿ 15–07–2018ರ ಒಳಗಾಗಿ ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳಿಗೆ ಲಿಖಿತ ರೂಪದಲ್ಲಿ ತಿಳಿಸುವುದು.

## ॥ ನೂತನ ಕಾರ್ಯಕಾರಿ ಸಮಿತಿಗೆ ಚುನಾವಣೆ ॥

ಸರ್ವಸದಸ್ಯರ ಸಭೆಯಲ್ಲಿ ಜರುಗಲಿರುವ ಚುನಾವಣೆಯಲ್ಲಿ ಕಾರ್ಯಕಾರಿ ಸಮಿತಿಯ 21 ಸ್ಥಾನಗಳನ್ನು ಅವಿರೋಧ ಆಯ್ಕೆ ಅಥವಾ, ಅವಶ್ಯವಿದ್ದಲ್ಲಿ, ಮತದಾನದ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ. ಆಯ್ಕೆಯಾದ ನೂತನ ಸಮಿತಿಯ ಸದಸ್ಯರುಗಳಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಸಹ ಕಾರ್ಯದರ್ಶಿಗಳು ಮತ್ತು ಖಜಾಂಚಿ ಇವರುಗಳನ್ನು ನೂತನ ಸದಸ್ಯರುಗಳು ಚುನಾಯಿಸುತ್ತಾರೆ.

ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಲು ಇಚ್ಛಿಸುವವರು ನಾಮಪತ್ರವನ್ನು ಈ ಮೂಲಕ ಲಗತ್ತಿಸಲಾಗಿರುವ ನಮೂನೆಯಲ್ಲಿ ಭರ್ತಿ ಮಾಡಿ ಸಲ್ಲಿಸಬೇಕು.

ಬೃಹಚ್ಚರಣ ಸಮುದಾಯಕ್ಕೆ ಸೇರಿದವರೂ, ಸಂಘದ ಸದಸ್ಯರಾಗಿರುವವರೂ, 18 ವರ್ಷಗಳಿಗೆ ಮೇಲ್ಪಟ್ಟವರೂ ಹಾಗೂ ಸದಸ್ಯತ್ವದ ವಾರ್ಷಿಕ ಚಂದಾ ಹಣವನ್ನು ಬಾಕಿಯಿಲ್ಲದೇ ಪಾವತಿಸಿರುವ ಎಲ್ಲ ಸದಸ್ಯರೂ ಚುನಾವಣೆಯಲ್ಲಿ ಸ್ಪರ್ಧಿಸಲು ಮತ್ತು ಮತ ನೀಡಲು ಅರ್ಹರಾಗಿರುತ್ತಾರೆ.

ವಂದನೆಗಳು,

**ಅಧ್ಯಕ್ಷರು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರುಗಳು, ಬೃಹಚ್ಚರಣ ಸಂಘ.**

## ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘ

ಶ್ರೀ ಶೇಷಗಿರಿ ನಿಲಯ, ಕಿತ್ತಿಗಾನಹಳ್ಳಿ, ಬೆಂಗಳೂರು 560 099

## 2018–21ನೇ ಸಾಲಿಗೆ ಕಾರ್ಯಕಾರಿ ಸಮಿತಿಗೆ ಚುನಾವಣೆ
## ಅಭ್ಯರ್ಥಿ ನಾಮಪತ್ರ ಸಲ್ಲಿಕೆಯ ಫಾರ್ಂ

_______________________________________ ಎಂಬ ಹೆಸರಿನ (ಸದಸ್ಯತ್ವ ಸಂಖ್ಯೆ ____________________ ) ನಾನು 2018–21ನೇ ಸಾಲಿನ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯ ಸ್ಥಾನಕ್ಕೆ ಸ್ಪರ್ಧಿಸಲು ನಾಮಪತ್ರವನ್ನು ಈ ಮೂಲಕ ಸಲ್ಲಿಸುತ್ತಿದ್ದೇನೆ.

____________________

ನಾಮಪತ್ರ ಸಲ್ಲಿಸುವವರ ಸಹಿ

ಸ್ಥಳ: ಟೆಲೆಫೋನ್/ಮೊಬೈಲ್ ಸಂಖ್ಯೆ

ದಿನಾಂಕ

____________________

ನಾಮಕರಣವನ್ನು ಅನುಮೋದಿಸುವವರ ಸಹಿ

ಸ್ಥಳ: ಹೆಸರು:

ದಿನಾಂಕ: ಸದಸ್ಯತ್ವ ಸಂಖ್ಯೆ:

ಮೊಬೈಲ್ ಸಂಖ್ಯೆ:

————————————————ವಿಭಾಜಕ ರೇಖೆ————————————————


## ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘ

ಶ್ರೀ ಶೇಷಗಿರಿ ನಿಲಯ, ಕಿತ್ತಿಗಾನಹಳ್ಳಿ, ಬೆಂಗಳೂರು 560 099

## 2018–21ನೇ ಸಾಲಿಗೆ ಕಾರ್ಯಕಾರಿ ಸಮಿತಿಗೆ ಚುನಾವಣೆ
## ಅಭ್ಯರ್ಥಿ ನಾಮಪತ್ರ ಸಲ್ಲಿಕೆಯ ಫಾರ್ಂ

_______________________________________ ಎಂಬ ಹೆಸರಿನ (ಸದಸ್ಯತ್ವ ಸಂಖ್ಯೆ ____________________ ) ನಾನು 2018–21ನೇ ಸಾಲಿನ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯ ಸ್ಥಾನಕ್ಕೆ ಸ್ಪರ್ಧಿಸಲು ನಾಮಪತ್ರವನ್ನು ಈ ಮೂಲಕ ಸಲ್ಲಿಸುತ್ತಿದ್ದೇನೆ.

____________________

ನಾಮಪತ್ರ ಸಲ್ಲಿಸುವವರ ಸಹಿ

ಸ್ಥಳ: ಟೆಲೆಫೋನ್/ಮೊಬೈಲ್ ಸಂಖ್ಯೆ

ದಿನಾಂಕ

____________________

ನಾಮಕರಣವನ್ನು ಅನುಮೋದಿಸುವವರ ಸಹಿ

ಸ್ಥಳ: ಹೆಸರು:

ದಿನಾಂಕ: ಸದಸ್ಯತ್ವ ಸಂಖ್ಯೆ:

ಮೊಬೈಲ್ ಸಂಖ್ಯೆ:

## ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘ

ಶ್ರೀ ಶೇಷಗಿರಿ ನಿಲಯ, ಕಿತ್ತಿಗಾನಹಳ್ಳಿ, ಬೆಂಗಳೂರು 560 099

## 2018–21ನೇ ಸಾಲಿಗೆ ಕಾರ್ಯಕಾರಿ ಸಮಿತಿಗೆ ಚುನಾವಣೆ
## ನಾಮಪತ್ರ ಹಿಂತೆಗೆದುಕೊಳ್ಳುವ ಫಾರ್ಂ

______________________________________ ಎಂಬ ಹೆಸರಿನ (ಸದಸ್ಯತ್ವ ಸಂಖ್ಯೆ ____________________ ) ನಾನು 2018–21ನೇ ಸಾಲಿನ ಕಾರ್ಯಕಾರಿ ಸಮಿತಿಯ ಸದಸ್ಯ ಸ್ಥಾನಕ್ಕೆ ಸ್ಪರ್ಧಿಸಲು ಸಲ್ಲಿಸಲಾಗಿದ್ದ ನಾಮಪತ್ರವನ್ನು ಈ ಮೂಲಕ ಸ್ವಇಚ್ಛೆಯಿಂದ ಹಿಂತೆಗೆದುಕೊಳ್ಳುತ್ತಿದ್ದೇನೆ.

____________________

ಅಭ್ಯರ್ಥಿಯ ಸಹಿ

ಸ್ಥಳ: ಟೆಲೆಫೋನ್/ಮೊಬೈಲ್ ಸಂಖ್ಯೆ

ದಿನಾಂಕ

————————————————ವಿಭಾಜಕ ರೇಖೆ————————————————


## ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘ

ಶ್ರೀ ಶೇಷಗಿರಿ ನಿಲಯ, ಕಿತ್ತಿಗಾನಹಳ್ಳಿ, ಬೆಂಗಳೂರು 560 099

## 2018–21ನೇ ಸಾಲಿಗೆ ಕಾರ್ಯಕಾರಿ ಸಮಿತಿಗೆ ಚುನಾವಣೆ
## ನಾಮಪತ್ರ ಹಿಂತೆಗೆದುಕೊಳ್ಳುವ ಫಾರ್ಂ

______________________________________ ಎಂಬ ಹೆಸರಿನ (ಸದಸ್ಯತ್ವ ಸಂಖ್ಯೆ ____________________ ) ನಾನು 2018–21ನೇ ಸಾಲಿನ ಕಾರ್ಯಕಾರಿ ಸಮಿತಿಯ ಸದಸ್ಯ ಸ್ಥಾನಕ್ಕೆ ಸ್ಪರ್ಧಿಸಲು ಸಲ್ಲಿಸಲಾಗಿದ್ದ ನಾಮಪತ್ರವನ್ನು ಈ ಮೂಲಕ ಸ್ವಇಚ್ಛೆಯಿಂದ ಹಿಂತೆಗೆದುಕೊಳ್ಳುತ್ತಿದ್ದೇನೆ.

____________________

ಅಭ್ಯರ್ಥಿಯ ಸಹಿ

ಸ್ಥಳ: ಟೆಲೆಫೋನ್/ಮೊಬೈಲ್ ಸಂಖ್ಯೆ

ದಿನಾಂಕ

# ಹಿರಿಯ ಚೇತನರಿಗೆ ಸಂಘದಿಂದ ಸನ್ಮಾನ

ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘವು ದಿನಾಂಕ 22–07–2018ರಂದು ಆಯೋಜಿಸಿರುವ ಕಾರ್ಯಕ್ರಮದಲ್ಲಿ 75ನೇ ವರ್ಷಕ್ಕೆ ಕಾಲಿರಿಸಿರುವ ನಮ್ಮ ಸಮುದಾಯದ 'ಹಿರಿಯ ಚೇತನ'ರನ್ನು ಸನ್ಮಾನಿಸಲು ತೀರ್ಮಾನಿಸಲಾಗಿದೆ.

ತಮ್ಮ ವಿವರಗಳನ್ನು ಕೆಳಕಾಣಿಸಿದ ನಮೂನೆಯಲ್ಲಿ ದಿನಾಂಕ 12–07–2018ರೊಳಗೆ ಕಾರ್ಯಕಾರಿ ಸಮಿತಿಯ ಸದಸ್ಯರಾದ **ಶ್ರೀ ಗಣೇಶ್ ಶ್ರೀಧರ್** ಅವರಿಗೆ (ಮೊ.9880187686) ಕಳುಹಿಸಲು ಕೋರಿದೆ.

**ಹಿರಿಯಚೇತನರ ವಿವರ:**

| ಹೆಸರು | ತಂದೆ/ತಾಯಿಯ ಹೆಸರು | ಹುಟ್ಟಿದ ದಿನಾಂಕ | ವಿಳಾಸ/ಸಂಚಾರಿದೂರವಾಣಿ | ಇತರೆ ವಿವರಣೆ |
|---|---|---|---|---|
| | | | | |

# ಪ್ರತಿಭಾ ವಿದ್ಯಾರ್ಥಿಗಳಿಗೆ ಸಂಘದಿಂದ ಪುರಸ್ಕಾರ

ಇದೇ ಸಂದರ್ಭದಲ್ಲಿ ನಮ್ಮ ಸಮುದಾಯಕ್ಕೆ ಸೇರಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ "ಪ್ರತಿಭಾ ವಿದ್ಯಾರ್ಥಿಗಳಿಗೆ ಪುರಸ್ಕಾರ" ನೀಡಲು ತೀರ್ಮಾನಿಸಿದೆ. ಎಸ್.ಎಸ್.ಎಲ್.ಸಿ, ದ್ವಿತೀಯ ಪಿ.ಯು.ಸಿ, ಪದವಿ, ತಾಂತ್ರಿಕ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಶೇಕಡ 60 ಕ್ಕೂ ಹೆಚ್ಚಿನ ಅಂಕಗಳನ್ನು ಗಳಿಸಿರುವ ವಿದ್ಯಾರ್ಥಿಗಳು "ಪ್ರತಿಭಾ ಪುರಸ್ಕಾರ"ಕ್ಕೆ ಅರ್ಹರಾಗಿರುತ್ತಾರೆ.

ಈ ನಿಟ್ಟಿನಲ್ಲಿ ವಿವರಗಳನ್ನು ಕೆಳಕಂಡ ನಮೂನೆಯಲ್ಲಿ ಕಾರ್ಯಕಾರಿ ಸಮಿತಿ ಸದಸ್ಯ **ಶ್ರೀ ಗಣೇಶ್ ಶ್ರೀಧರ್** ಅವರಿಗೆ ದಯವಿಟ್ಟು 12–07–2018ರ ಒಳಗಾಗಿ ಕಳುಹಿಸಬೇಕಾಗಿ ಕೋರಿದೆ. ಇದರಿಂದಾಗಿ ಮುಂದೆ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಾಗ ನಮ್ಮ ಸಮುದಾಯದ ಯುವಜನಾಂಗದಲ್ಲಿನ ಪ್ರತಿಭೆಯನ್ನು ಗುರುತಿಸಿ, ವೇದಿಕೆಯನ್ನು ಕಲ್ಪಿಸಲು ಅನುಕೂಲವಾಗುತ್ತದೆ.

**ಪ್ರತಿಭಾ ಪುರಸ್ಕಾರ ಪಡೆಯುವವರ ವಿವರ:**

| ಹೆಸರು | ತಂದೆ/ತಾಯಿಯ ಹೆಸರು | ಹುಟ್ಟಿದ ದಿನಾಂಕ | ವಿಳಾಸ/ಸಂಚಾರಿದೂರವಾಣಿ | ತೇರ್ಗಡೆ ಹೊಂದಿದತರಗತಿ | ಶೇಕಡ % ಅಂಕ* | ಇತರ ಹವ್ಯಾಸಗಳು |
|---|---|---|---|---|---|---|
| | | | | | | |

ವಿದ್ಯಾರ್ಥಿಗಳು ತಮ್ಮ ವಿವರಗಳನ್ನು ಅಂಕ ಪಟ್ಟಿಯ ಪ್ರತಿಯೊಡನೆ ಈ ಕೆಳಕಾಣಿಸಿರುವ ಇ–ಮೇಲ್‌ಗಳಿಗೆ ಕಳುಹಿಸಬಹುದು.

**ganeshsridhar29@gmail.com, mmdbs2010@gmail.com**

ಈ ಎಲ್ಲಾ ಕಾರ್ಯಕ್ರಮಗಳಿಗೆ ಸದಸ್ಯರುಗಳೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಪ್ರಾರ್ಥನೆ.

ವಂದನೆಗಳು,

**ಅಧ್ಯಕ್ಷರು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರುಗಳು, ಬೃಹಚ್ಚರಣ ಸಂಘ.**

**ವಿ.ಸೂ.:** ವಿಧ್ಯಾರ್ಥಿ ಪ್ರತಿಭಾ ಪುರಸ್ಕಾರ, ಹಿರಿಯ ಚೇತನರಿಗೆ ಸನ್ಮಾನ ಹಾಗೂ ಅನ್ನ ಸಂತರ್ಪಣ ಕಾರ್ಯಕ್ರಮಗಳಿಗೆ ಪ್ರಾಯೋಜಕರಾಗುವವರಿಗೆ ಸಂಘವು ಆಭಾರಿಯಾಗಿರುತ್ತದೆ.

**PRASAD & KUMAR**
CHARTERED ACCOUNTANTS
315, 6th Main Road, HAL II Stage, Indiranagar
Bangalore 560 038

Partners:
B.N. Govinda Prasad, B.Com, FCA. ISA
Mobile: 9845128229
Email: prasad@bngassociates.co.in

B.N.G. Kumar, B.Com, AICWA, FCA
Mobile: 9980329574
Email: kumar@bngassociates.co.in

## AUDITORS' REPORT

We have audited the attached Balance Sheet of **MYSORE MANJAPATHUR DRAVIDA BRUHACHARANA SANGHA, BANGALORE** as at **31st March '18** and the Statements of Income and Expenditure and Receipts and Payments for the year ended on that date (hereinafter collectively referred to as "financial statements"), annexed hereto. These financial statements are the responsibility of the entity being reported. Our responsibility is to express an opinion on these financial statements based on our audit.

We conducted our audit in accordance with generally accepted auditing standards in India. These standards require that we plan and perform the audit to obtain reasonable assurance about whether the financial statements are free of material misstatement. An audit includes examining, on a test basis, evidence supporting the amounts and disclosures in the financial statements. An audit also includes assessing the accounting principles used and significant estimates made by management, as well as evaluating the overall financial statement presentation. We believe that our audit provides a reasonable basis for our opinion.

3. We report that

(i) We have obtained all the information and explanations which to the best of our knowledge and belief, were necessary for the purpose of our audit.

(ii) In our opinion, the Society has kept proper books of account as required by law so far, as appears from our examination of such books.

(iii) The said financial statements dealt with in the report are in agreement with the books of account.

(iv) In our opinion and to the best of our information and according to the explanation given to us, the said financial statements gives a true and fair view in conformity with the accounting principles generally accepted and applicable to the reporting entity.

PRASAD & KUMAR Bangalore - 38. Chartered Accountants

Sd/-
**B.N.Govinda Prasad**
**Partner**
**MembershipNo.23521**
**For & on behalf of**
**M/s. Prasad & Kumar**
**Chartered Accountants**
**Firm Regn No. 005837S**

**Place : Bangalore**
**Dated : 22nd June 2018**

# MYSORE MANJAPATHUR DRAVIDA BRUHACHARANA SANGHA

## BALANCE SHEET AS AT 31st MARCH 2018

| CAPITAL AND LIABILITIES | Rs. | Rs. |
|---|---|---|
| **CAPITAL FUND** | | |
| Opening Balance as on 1st April 2017 | 24,42,618 | |
| Excess of Income over Expenditure for the year | 3,05,890 | |
| | | 27,48,508 |
| SHASHWATHA ANNADAANA FUND | | 13,70,005 |
| VIDHYANIDHI FUND | | 4,51,869 |
| BUILDING FUND | | 15,000 |
| **TOTAL** | | **45,85,382** |

| ASSETS AND PROPERTIES | | |
|---|---|---|
| **INVESTMENTS** | | |
| Deposits with National Co-op Bank Ltd | 38,27,724 | |
| Deposits with Canara Bank | 5,38,643 | |
| | | 43,66,367 |
| **OTHER CURRENT ASSETS** | | |
| TDS Receivable - FY 15-16 | 30,730 | |
| TDS Receivable - FY 16-17 | 33,838 | |
| TDS Receivable - FY 17-18 | 37,035 | |
| Interest Accrued on Deposits with Canara Bank | 31,706 | |
| Interest Accrued on Deposits with National Co-op Bank Ltd | 5,792 | |
| | | 1,39,101 |
| **CASH AND BANK BALANCES** | | |
| Balance in Savings Account with National Co-op Bank Ltd | 78,251 | |
| Balance in Savings Account with Canara Bank | 1,579 | |
| Cash on Hand | 84 | |
| | | 79,914 |
| **TOTAL** | | **45,85,382** |

Sd/-
S.Somasundara - President

Sd/-
V.S.Mani - Secretary

Sd/-
S.Sathya Narayana - Treasurer

Bangalore
Dated: 22nd June 2018

As per our report of even date attached

Sd/-
B.N.Govinda Prasad, Partner
Membership No.23521
for PRASAD AND KUMAR
Chartered Accountants
Firm Regn No. 005837S

PRASAD & KUMAR
Bangalore - 38.
Chartered Accountants

# MYSORE MANJAPATHUR DRAVIDA BRUHACHARANA SANGHA

## STATEMENT OF INCOME AND EXPENDITURE FOR THE YEAR ENDING 31ST MARCH 2018

| | Rs. | Rs. |
|---|---|---|
| **A. INCOME** | | |
| Membership - New | 65,001 | |
| General | 1,03,175 | |
| Annual Membership Fee | 82,150 | |
| Satyanarayana Pooja | 1,93,517 | |
| Grill Work | 25,000 | |
| Hundi | 19,226 | |
| Calender | 6,000 | |
| Shankara Jayanti | 6,500 | |
| Interest On FDs with Canara Bank | 22,332 | |
| Interest on FDs with National Co-op Bank Ltd | 3,48,012 | |
| Interest - Savings Accounts | 4,900 | |
| | | 8,75,813 |
| **B. EXPENDITURE** | | |
| Shankara Jayanti | 16,702 | |
| Satyanarayana Pooja | 2,23,500 | |
| Nagaaradhane | 1,05,210 | |
| General Body Meeting and Prathiba Puraskaara | 96,375 | |
| Magazine and Calender Printing | 98,152 | |
| Grill work | 19,500.00 | |
| Donation to Akhila Braahmana Maha Sabha | 10,000 | |
| Bank Chgs | 484 | |
| | | 5,69,923 |
| **C. SURPLUS TRANSFERRED TO CAPITAL FUND (A minus B)** | | 3,05,890 |

Sd/-
S.Somasundara - President

Sd/-
V.S.Mani - Secretary

Sd/-
S.Sathya Narayana - Treasurer

Bangalore
**Dated: 22nd June 2018**

As per our report of even date attached

Sd/-
B.N.Govinda Prasad, Partner
Membership No.23521
for PRASAD AND KUMAR
Chartered Accountants
Firm Regn No. 005837S

PRASAD & KUMAR
Bangalore - 38.
Chartered Accountants

# MYSORE MANJAPATHUR DRAVIDA BRUHACHARANA SANGHA

## STATEMENT OF RECEIPTS AND PAYMENTS FOR THE YEAR ENDING 31ST MARCH 2018

| INFLOW OF FUNDS | Rs. | Rs. |
|---|---|---|
| **OPENING BALANCES** | | |
| Cash on hand | 284 | |
| Savings Account - National Co-op Bank Ltd | 1,65,523 | |
| Savings Account - Canara Bank | 1,42,692 | |
| | | 3,08,499 |
| **ADDITIONS TO PERMANENT FUNDS** | | |
| Shashwatha Annadaana Fund | 2,49,450 | |
| Vidhyanidhi Fund | 1,29,001 | |
| | | 3,78,451 |
| **REDEMPTION OF INVESTMENTS** | | |
| Maturity proceeds of FDs with National Co-op Bank Ltd | | 10,00,000 |
| **OTHER REVENUE RECEIPTS** | | |
| Membership - New | 65,001 | |
| General | 1,03,175 | |
| Annual Membership Fee | 82,150 | |
| Satyanarayana Pooja | 1,93,517 | |
| Grill Work | 25,000 | |
| Hundi | 19,226 | |
| Calender | 6,000 | |
| Shankara Jayanti | 6,500 | |
| Interest on FDs with NCB | 3,07,418 | |
| Interest - Savings Accounts - NCB + CBk | 4,900 | |
| | | 8,12,887 |
| **TOTAL** | | 24,99,837 |
| **OUTFLOW OF FUNDS** | | |
| **INVESTMENTS** | | |
| New Deposits with National Co-op Bank Ltd | 14,75,000 | |
| New Deposits with Canara Bank | 3,75,000 | |
| | | 18,50,000 |
| **OTHER REVENUE PAYMENTS** | | |
| Shankara Jayanti | 16,702 | |
| Satyanarayana Pooja | 2,23,500 | |
| Nagaaradhane | 1,05,210 | |
| General Body Meeting and Prathiba Puraskaara | 96,375 | |
| Magazine and Calender Printing | 98,152 | |
| Grill work | 19,500 | |
| Donation - Akhila Braahmana Maha Sabha | 10,000 | |
| Bank Chgs | 484 | |
| | | 5,69,923 |
| **CLOSING BALANCES** | | |
| Cash on hand | 84 | |
| Savings Account - National Co-op Bank Ltd | 78,251 | |
| Savings Account - Canara Bank | 1,579 | |
| | | 79,914 |
| **TOTAL** | | 24,99,837 |

Sd/-
S.Somasundara - President

As per our report of even date attached

Sd/-
V.S.Mani - Secretary

Sd/-
B.N.Govinda Prasad, Partner
Membership No.23521
for PRASAD AND KUMAR
Chartered Accountants
Firm Regn No. 005837S

Sd/-
S.Sathya Narayana - Treasurer

Bangalore
Dated: 22nd June 2018

PRASAD & KUMAR
Bangalore - 30.
Chartered Accountants

# ಶ್ರೀಚಕ್ರ



ಶ್ರೀಚಕ್ರ ಅತ್ಯಂತ ಮಹಿಮಾನ್ವಿತ ಚಕ್ರ. ಅನಂತ, ಅದ್ಭುತ ಸೃಷ್ಟಿಯ ದೈವೀತಂತ್ರದ ಚೌಕಟ್ಟು. ಸೃಷ್ಟಿಯ ಜನನಿ ಶ್ರೀಲಲಿತೆಯ ಮೂರ್ತರೂಪದ ರೇಖಾಯಂತ್ರ. ಆದಿ ಶಂಕರಾಚಾರ್ಯರು ಉಗ್ರಶಕ್ತಿ ಸೋಪಾನವಾಗಿದ್ದ ಶ್ರೀಚಕ್ರವನ್ನು ಪರಿಷ್ಕರಿಸಿ, ಮಂಗಳಕರ ಶಕ್ತಿದೇವಿಯ ಸಾತ್ವಿಕ ರೂಪವು ಉಗಮಿಸುವಂತೆ ಮಾಡಿದರು. ಕ್ರಮಬದ್ಧವಾಗಿ ರಚಿಸಿದ ಶ್ರೀಚಕ್ರದ ಮೇಲೆ ಲೇಸರ್ ಕಿರಣಗಳನ್ನು ಹಾಯಿಸಿದಾಗ 'ಶ್ರೀ ಲಲಿತಾದೇವಿ'ಯ ಚಿತ್ರ ಗೋಚರಿಸಿದ್ದು ದಾಖಲಾಗಿದೆ. ಜೊತೆಗೆ ಶಬ್ದವನ್ನು ದೃಶ್ಯರೂಪವಾಗಿ ಪರಿವರ್ತಿಸುವ ಶಬ್ದ ಹಾಗೂ ಕಂಪನಗಳ ಪ್ರಭಾವದ ಅರಿವು ಮೂಡಿಸುತ್ತದೆ.

ಶ್ರೀಚಕ್ರದ ಮೇಲೆ ಇಟ್ಟ ದೃಷ್ಟಿ ನರಮಂಡಲದಲ್ಲಿ ಉಂಟಾಗುವ ಕಂಪನ ಇಇಜಿಯಲ್ಲಿ (ಎಲೆಕ್ಟ್ರೋ ಎನ್‌ಸೆಫೆಲೋಗ್ರಫಿ) ಅಲ್ಫಾ ಅಲೆ ಹೊರಡಿಸುತ್ತದೆ. ಧ್ಯಾನಸ್ಥಿತಿಯಲ್ಲೂ ಈ ಅಲೆ ನಿಧಾನಗತಿಯಲ್ಲಿ ಹೊರಹೊಮ್ಮುತ್ತದೆ. ಯಾವುದೇ ಇತರ ಚಕ್ರ ವೀಕ್ಷಿಸಿದಾಗ ಇಇಜಿ ಅಲೆಗಳಲ್ಲಿ ಬದಲಾವಣೆ ಕಾಣುವುದಿಲ್ಲ. ಶಕ್ತಿಯುತ ಅಣು–ಕ್ಷಣಗಳಿಂದಾದ ಅಲೆ ವಿದ್ಯುತ್ ಅಯಸ್ಕಾಂತ ಬಲಕಾರಕ–ಶಕ್ತಿ ಸಮಾಗಮಕ್ಕೆ ನಾಂದಿ. ಶ್ರೀಚಕ್ರದ ಮೂಲಕ ದಿವ್ಯ ಮಂತ್ರೋಚ್ಚಾರಗಳಿಂದಾದ ಶಬ್ದ ಬ್ರಹ್ಮಶಕ್ತಿ ಇದನ್ನು ಸಾಧಿಸುತ್ತದೆ ಎಂದು ಭಾವಿಸಬಹುದು. ಒಂದು ದೃಷ್ಟಿಯಲ್ಲಿ 'ಆದಿ ಶಂಕರಾಚಾರ್ಯರು' ಕಣ ಭೌತಶಾಸ್ತ್ರದ 'ಪಿತಾಮಹ' ಎನ್ನಬಹುದು. ಬೀಜಾಕ್ಷರಗಳ ಅಳವಡಿಕೆಯಿಂದ ಶ್ರೀಚಕ್ರದ ಪರಾಶಕ್ತಿಯ ಚಟುವಟಿಕೆಯನ್ನೇ ನಿಗ್ರಹಿಸಿದರು. 'ಶ್ರೀ ಸೌಂದರ್ಯಲಹರೀ'ಯ ಕಮಲದಲ್ಲೂ ಇರಬಹುದೆಂಬೋ ಗ್ರಹಿಕೆಗೆ ಇಂಬುಕೊಟ್ಟಿದ್ದಾರೆ. ಶ್ರೀಚಕ್ರ ನರ ಚಟುವಟಿಕೆಯ ವೈಜ್ಞಾನಿಕ ವಿವರಣೆಗೂ ಪ್ರೇರಕ ಸೂತ್ರ. ಈ ಚಕ್ರದ ಚೌಕಟ್ಟು ಜ್ಞಾನೇಂದ್ರಿಯ ಮಟ್ಟದ ಆಧುನಿಕ ನರಶಾಸ್ತ್ರ ವಿವರಣೆಗೆ ಹೋಲಿಕೆ ಇದೆ. ಬಲಮಿದುಳು, ದೃಷ್ಟಿ, ಶ್ರವಣಶಕ್ತಿ ಚೇತಕವೆಂದು ನಂಬಿದ್ದ ಋಷಿಗಳು ಮಾನವ ದೇಹ ಕಾರ್ಯಶೀಲತೆಯ ವಿಸ್ತಾರ ಜ್ಞಾನ ಪಡೆದಿದ್ದುದರಲ್ಲಿ ಆಶ್ಚರ್ಯವಿಲ್ಲ. ಜೊತೆಗೆ ಅವರು ಅದ್ವಿತೀಯ ಮನೋಗೋಚರ ಶಕ್ತಿ ಹೊಂದಿದ್ದರು. ಈಜಿಪ್ಟ್ ದೇಶದ 'ಪಿರಮಿಡ್ ರಚನಾ' ಶಾಸ್ತ್ರಕ್ಕೂ ಶ್ರೀಚಕ್ರದ ರೇಖಾಗಣಿತ ರಹಸ್ಯ ಕೊಡುಗೆ ಇದೆ ಎನ್ನುವ ಅಭಿಪ್ರಾಯ ಇದೆ. ಶ್ರೀಚಕ್ರದ ರಹಸ್ಯ ಭೇದಿಸಲು ಮಾಸ್ಕೋ ವಿಶ್ವವಿದ್ಯಾಲಯ ಸಂಶೋಧನೆ ನಡೆಸುತ್ತಿದೆ. ಭಾರತದ ವೇದಶಾಸ್ತ್ರ ವಿಜ್ಞಾನ ಹಾಗೂ ವೈದ್ಯ ವಿಜ್ಞಾನದ ಸಂಶೋಧನೆಗಳು ಸಂಯೋಜಿತ ರೀತಿಯಲ್ಲಿ ಸಾಗಬೇಕಾಗಿದೆ. ಇತ್ತೀಚಿನ ವರದಿಯೊಂದು 'ಶ್ರೀಚಕ್ರ'ದ ಆರಾಧನೆ ಜೀವಕೋಶದಲ್ಲಿರುವ ಡಿ.ಎನ್.ಎ.ಯನ್ನು ಕಾರ್ಯಚಟುವಟಿಕೆಯ ಪರಿಧಿಗೆ ಬರುವಂತೆ ಪ್ರಚೋದಿಸುತ್ತದೆ ಎಂದು ಹೇಳಿದೆ.

**ಛಾಯಾ ಭಗವಾನ್**
9980162364



# ಶ್ರೀ ಶಂಕರರ ಮಾತೃ ಪಂಚಕಮ್
# – ತಾಯಿಯ ಹಿರಿಮೆ

ಸನಾತನ ಧರ್ಮದಲ್ಲಿ, ವೇದಗಳಲ್ಲಿ ತಾಯಿಗೆ ಶ್ರೇಷ್ಠ ಸ್ಥಾನವನ್ನು ನೀಡಲಾಗಿದೆ. "ಮಾತೃ ದೇವೋ ಭವ" ಎಂದು ತೈತ್ತರೀಯ ಉಪನಿಷತ್‌ನಲ್ಲಲ್ಲದೆ "ಮಾತೃ ಸ್ತವನಮ್" ಮತ್ತು "ದೇವ್ಯಪರಾಧಕ್ಷಮಾಪಣ" ಸ್ತೋತ್ರದಲ್ಲೂ ಮಾತೃವಿನ ಬಗ್ಗೆ ಉಲ್ಲೇಖವಿದೆ. ಆದಿಗುರು ಶ್ರೀ ಶಂಕರ ಭಗವತ್ಪಾದರು ಈ ಮಹತ್ವವನ್ನು ತಿಳಿಸಲು ತಮ್ಮ "ಮಾತೃ ಪಂಚಕಮ್" ಸ್ತೋತ್ರವನ್ನು ರಚಿಸಿದ್ದಾರೆ. ತಾಯಿ ಆರ್ಯಾಂಬೆಗೆ ಕಡೆಗಾಲದಲ್ಲಿ ತಾವು ಬರುವುದಾಗಿ ಶಂಕರರು ಮಾತು ನೀಡಿದ್ದರು. ಶ್ರೀ ಶಂಕರರು ತಾಯಿಗೆ ಮಗನಾಗಿ ಮಾಡಬೇಕಾದ ಕರ್ತವ್ಯಗಳನ್ನು ಮಾಡಲಾಗಲಿಲ್ಲವಲ್ಲಾ ಎಂಬ ವಿಚಾರ ಅವರ ಮನಸ್ಸಿನಲ್ಲಿ ಬಂದಾಗ ಈ ಪಂಚಕವು ಸ್ಫುರಿಸಿತು.  ಅದರಂತೆ ಶ್ರೀ ಶಂಕರರು ತಾಯಿಯ ಅಂತ್ಯಸಂಸ್ಕಾರ ಸಮಯದಲ್ಲಿ ಬಂದು ಆಕೆಯ ತ್ಯಾಗ, ನಿಸ್ವಾರ್ಥ ಪ್ರೇಮ, ಕರುಣೆ, ಧನ್ಯತಾಭಾವವನ್ನು ಗುರುತಿಸಿ ಆಕೆಗೆ ವಂದನೆಗಳನ್ನು ಈ ಸ್ತೋತ್ರದ ಮೂಲಕ ಅರ್ಪಿಸುತ್ತಾರೆ. ಶ್ರೀ ಶಂಕರರು ದೇವಾನುದೇವತೆಗಳ ಹಲವಾರು ಸ್ತೋತ್ರಗಳನ್ನು ರಚಿಸಿದ್ದಾರಲ್ಲದೆ ದೈವ ಸಮಾನವಾದ ತಾಯಿಯನ್ನು ಕುರಿತು ಈ ಐದು ಸ್ತೋತ್ರಗಳನ್ನು ನಮಗಾಗಿ ರಚಿಸಿದ್ದಾರೆ.

ತಾಯಿಯನ್ನು ಗರ್ಭ ಧರಿಸಿರುವಾಗ ಧಾತ್ರಿ ಎಂದೂ, ಜನ್ಮ ಕೊಟ್ಟಾಗ ಜನನಿ ಎಂದೂ, ಶೈಶಾವಾವಸ್ಥೆಯಲ್ಲಿ ಪಾಲಿಸುವಾಗ ಅಂಬಾ ಎಂದೂ, ಸಂಸ್ಕಾರವಂತರಾಗಿ ಬೆಳೆಸುವಾಗ ವೀರಸೂ ಎಂದೂ, ಸೇವೆ ಮತ್ತು ಉಪಚರಿಸುವಾಗ ಶುಶ್ರೂ ಎಂದೂ ಹೇಳಲಾಗುತ್ತದೆ.

ಮಾತೃ ಪದವು "ಅಮ್ಮ" ಎಂದು ಆಡುಭಾಷೆಯಲ್ಲಿ ಬಳಕೆಯಲ್ಲಿದೆ.  ಮಾತೃವು ಮಮತೆಯ ಸಾಕಾರವಾದ್ದರಿಂದ "ಮಾ" ಎಂಬ ವ್ಯಂಜನವು ಪ್ರಧಾನವಾಗಿರುತ್ತದೆ. ಪ್ರಪಂಚದ ಯಾವುದೇ ಭಾಗದಲ್ಲಾದರೂ, ಯಾವುದೇ ಬಾಷೆಯಾದರೂ "ಮಾ" ಎಂಬ ಅಕ್ಷರವು ತಾಯಿ ಎಂಬ ಸಂಬಂಧವನ್ನು ಸೂಚಿಸುತ್ತದೆ.  ಪ್ರಾಣಿವರ್ಗದಲ್ಲೂ ಕೂಡ ಮಾ, ಅಂಬಾ ಎಂಬ ಕೂಗು, ಶಬ್ದ ಇದೆ.

ಮಾತೃ ಪಂಚಕದ ಮೊದಲನೆ ಸ್ತೋತ್ರದಲ್ಲಿ ಶ್ರೀ ಶಂಕರರು ಹೆತ್ತ ತಾಯಿಯ ಋಣವನ್ನು ಯಾವ ಜೀವಿಯೂ ತೀರಿಸಲಾಗುವುದಿಲ್ಲ.  ತಾಯಿಗೆ ಶಿಶುವಿನ ಗರ್ಭಾವಸ್ಥೆಯಲ್ಲಿ, ಜನನ ಸಮಯದಲ್ಲಿ, ನಂತರ ಪಾಲಿಸುವ ಸಮಯದಲ್ಲಿ ಆಗುವ ಅಸಹನೀಯ ವೇದನೆ, ಶಿಶುವಿನ ಮಲ–ಮೂತ್ರಗಳನ್ನು ತೆಗೆದು ಸ್ವಚ್ಛಗೊಳಿಸುವುದು, ನಿದ್ರಾಹೀನ ರಾತ್ರಿಗಳು ಮತ್ತು ಇನ್ನೂ ಮುಂತಾದ ಕಷ್ಟಗಳನ್ನು ಸಹಿಸಿ ಇವೆಲ್ಲವನ್ನೂ ಮಮತೆಯಿಂದ ಮಾಡುತ್ತಾಳೆ ಎಂದಿದ್ದಾರೆ.

ಎರಡನೆಯ ಸ್ತೋತ್ರದಲ್ಲಿ ಆದಿಗುರುಗಳು ತಾಯಿಯ ವಾತ್ಸಲ್ಯದ ಬಗ್ಗೆ ಹೇಳಿದ್ದಾರೆ. ಅವರ ತಾಯಿಗೆ ಮಗನು ಸಂನ್ಯಾಸಿಯಾಗುತ್ತಾನೆಂಬ ವಿಷಯ ಕನಸಿನಲ್ಲಿ ಬಂದಾಗ ರೋದಿಸುತ್ತಾ ಗುರುಕುಲಕ್ಕೆ ಬಂದಿದ್ದು, ಅಲ್ಲಿನ ಶಿಷ್ಯವೃಂದವೂ ತಾಯಿಯೊಂದಿಗೆ ರೋದಿಸಿದ್ದನ್ನು ನೆನೆಯುತ್ತಾರೆ.

ಮೂರನೆಯ ಸ್ತೋತ್ರದಲ್ಲಿ ತಾಯಿಯ ಮರಣ ಸಮಯದಲ್ಲಿ ಬಂದು ಗಂಗಾತೀರ್ಥ ಹಾಕದಿದ್ದಕ್ಕೆ, ಶಾಸ್ತ್ರವಿಧಿಯ ಪ್ರಕಾರವಾಗಿ ತರ್ಪಣಾದಿಗಳನ್ನು ಮಾಡದಿದ್ದಕ್ಕೆ, ದೇವರ ತಾರಕ ನಾಮವನ್ನು ಆಕೆಯ ಕಿವಿಯಲ್ಲಿ ಜಪಿಸಲಾಗದಿದ್ದಕ್ಕೆ ಕ್ಷಮಿಸೆಂದು ಕೇಳಿಕೊಳ್ಳುತ್ತಾರೆ.

ನಾಲ್ಕನೆಯ ಸ್ತೋತ್ರದಲ್ಲಿ ತಾಯಿಯು ಶ್ರೀ ಶಂಕರರನ್ನು "ರಾಜಾ", "ಕಣ್ಣಾ" ಎಂದು ಮುದ್ದಾದ ನಾಮಗಳಿಂದ ಕರೆದು ಶತಾಯುಷಿ ಆಗೆಂದು ಹರಸಿದ ಬಾಯಿಗೆ ತಾನು ಕೊನೆಗೆ ಅಕ್ಕಿಕಾಳನ್ನು ಹಾಕಬೇಕಾಗಿದೆಯೆಲ್ಲಾ ಎಂದು ನೊಂದು ನುಡಿಯುತ್ತಾರೆ.

ಐದನೆಯ ಮತ್ತು ಕೊನೆಯ ಸ್ತೋತ್ರದಲ್ಲಿ ಪ್ರಸವ ವೇದನೆಯ ಸಮಯದಲ್ಲಿ "ಅಮ್ಮಾ, "ಅಪ್ಪಾ", "ಶಿವ", "ಕೃಷ್ಣ", "ಗೋವಿಂದ", "ಮುಕುಂದ" ಎಂದೆಲ್ಲಾ ನೋವಿನಿಂದ ಚೀರಾಡಿದರೂ ಜನನದ ನಂತರ ಕಂದನನ್ನು ಪ್ರೀತಿಯಿಂದ ಲಾಲಿಸಿ, ಪೋಷಿಸಿ ಸಲಹಿದ್ದಕ್ಕೆ ಶಂಕರರು ಅಂಜಲೀ ಬದ್ಧರಾಗಿ ನಮಸ್ಕರಿಸುತ್ತಾರೆ.

ಶ್ರೀ ಶಂಕರರು ತಮ್ಮ ದೇವ್ಯಪರಾಧಕ್ಷಮಾಪಣದ ಎರಡು, ಮೂರು ಮತ್ತು ನಾಲ್ಕನೆ ಸ್ತೋತ್ರಗಳ ಕೊನೆಯ ಸಾಲಿನಲ್ಲಿ "ಕುಪುತ್ರೂ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ" ಎಂದಿದ್ದಾರೆ. ಈ ಸ್ತೋತ್ರದ ವಾಚ್ಯಾರ್ಥ "ಲೋಕದಲ್ಲಿ ಕೆಟ್ಟ ಮಕ್ಕಳು ಹುಟ್ಟಬಹುದೇ ಹೊರತು ಕೆಟ್ಟ ತಾಯಿಯು ಎಂದಿಗೂ ಇರುವುದು ಸಾಧ್ಯವಿಲ್ಲ." ಭಾವಾರ್ಥವೇನೆಂದರೆ ಕ್ಷಮಾಹೀನ ತಾಯಿ ಮತ್ತು ತಾಯಿತನದ ಲೋಪವನ್ನು ಮಾಡುವ ತಾಯಿ ಇರುವುದಿಲ್ಲ.

ಪಾಶ್ಚಾತ್ಯರು ಪ್ರತೀ ವರ್ಷ ಮೇ ತಿಂಗಳ ಎರಡನೇ ಭಾನುವಾರವನ್ನು ಮಾತ್ರ "ಮದರ್ಸ್ ಡೇ" ಎಂದು ಆಚರಿಸುತ್ತಾರೆ. ಆದರೆ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ತಾಯಿಯನ್ನು ಪ್ರತೀ ದಿನವೂ ಪೂಜನೀಯ ಭಾವದಿಂದ ಕಾಣುತ್ತೇವೆ. ಇತ್ತೀಚಿಗೆ ಭಾರತ ದೇಶದಲ್ಲೂ ಪಾಶ್ಚಾತ್ಯ ಸಂಸ್ಕೃತಿಯ ವ್ಯಾಮೋಹದಿಂದ ಒಂದು ದಿನದ ಮಟ್ಟಿಗೆ ತಾಯಿಯನ್ನು ಆದರಿಸುವ ರೂಢಿ ಬರುತ್ತಿದೆ. ಇದು ಹೀಗಾಗದೆ ಹೊತ್ತು, ಹೆತ್ತು, ಸಾಕಿ, ಸಲಹಿದ ತಾಯಿಯ ಋಣ ತೀರಿಸಲಾಗದೇ ಇದ್ದರೂ ಅವಳ ಸೇವೆ ಮಾಡುವುದು ಪ್ರತೀ ಮಕ್ಕಳ ಕರ್ತವ್ಯ. ಸೇವೆಗೆ ಸಮಯವಿಲ್ಲದಿದ್ದರೂ ಪ್ರತೀ ದಿನವೂ ಪ್ರೀತಿಯ ಮಾತುಗಳನ್ನಾಡಬಹುದಲ್ಲವೇ? ಈಗಿನ ಆಧುನಿಕ ಮತ್ತು ವೇಗದ ಯುಗದಲ್ಲಿ ಮಕ್ಕಳು ಸೌಲಭ್ಯ ಒದಗಿಸಿ ಬಾಂಧವ್ಯಗಳನ್ನು ಮರೆಯುತ್ತಿದ್ದಾರೆ. ಸೌಲಭ್ಯದಿಂದ ಸೌಖ್ಯವು ದೊರೆಯುವುದಿಲ್ಲ.

ಪರಮಹಂಸ ರಾಮಕೃಷ್ಣರು, ಸ್ವಾಮಿ ವಿವೇಕಾನಂದರು ಹೆತ್ತ ತಾಯಿಯನ್ನೇ ಅಲ್ಲದೆ ಪ್ರತೀ ಸ್ತ್ರೀಯನ್ನು ತಾಯಿಯಂತೆಯೇ ಕಂಡವರು. ಈ ಭಾವದಿಂದ ಕಾಣುವಂತಾದರೆ ಸಂಸಾರದಲ್ಲಿ ಸಹಜವಾಗಿ ಬರುವ ಸಣ್ಣ ಪುಟ್ಟ ವೈಮನಸ್ಯಗಳೂ ದೂರವಾಗಿ ಸುಖೀ ಸಂಸಾರಕ್ಕೆ ನಾಂದಿಯಾಗುತ್ತದೆ. ಈ ಭಾವದಿಂದ ದರ್ಶಿಸಲು ನಾವು ಸ್ತ್ರೀಯರ ಬಗ್ಗೆ ಪೂಜ್ಯತಾ ಭಾವ ಬೆಳೆಸಿಕೊಳ್ಳಬೇಕು. ಆಗ ನಮ್ಮಲ್ಲಿ ಸುಧಾರಣೆ, ಸಾಮಾಜಿಕ ಬದಲಾವಣೆ ಸಾಧ್ಯ.



**ಆರ್. ರಮೇಶ್**
9986034048

# ನಾವೇ ನಮ್ಮ ಬದುಕಿನ ರೂವಾರಿಗಳು

ಪ್ರಾಚೀನ ಕಾಲದಲ್ಲಿ ಕಾಶೀ ರಾಜ್ಯದಲ್ಲಿ ವಿಚಿತ್ರ ರಾಜ್ಯಾಡಳಿತ ಪದ್ಧತಿ ಇತ್ತಂತೆ. ಐದು ವರ್ಷಗಳಿಗೊಮ್ಮೆ ರಾಜನನ್ನು ಆರಿಸುತ್ತಿದ್ದರು. ಪ್ರಜೆಗಳ ಆಯ್ಕೆಯಾಗಿರುತ್ತಿತ್ತದು. ಉಮೇದುವಾರರಾಗಿ ಯಾರೂ ಸ್ಪರ್ಧಿಸಬಹುದಾಗಿತ್ತು. ಇದೇನು ವಿಶೇಷ? ನಮ್ಮ ಇಂದಿನ ಪ್ರಜಾಪ್ರಭುತ್ವದ ಕ್ರಮದಂತಿದೆಯಲ್ಲಾ ಅಂದುಕೊಳ್ಳಬೇಡಿ. ವಿಶೇಷ ಇದ್ದದ್ದು ಆಡಳಿತ ಕೊನೆಯಾಗುವ ಪರಿಯಲ್ಲಿ. ಐದು ವರ್ಷಗಳ ಕೊನೆಯಲ್ಲಿ ರಾಜನನ್ನು ನದಿ ದಾಟಿಸಿ ಗಂಗೆಯ ಆಚೆ ತಟದಲ್ಲಿದ್ದ ಹಿಂಸ್ರ ಪಶುಗಳಿಂದ ತುಂಬಿದ್ದ ಕಾಡಿನಲ್ಲಿ ಬಿಟ್ಟು ಬರಲಾಗುತ್ತಿತ್ತು. ಅಲ್ಲಿ ಅವನು ಪ್ರಾಣಿಗಳಿಗೆ ಆಹಾರವಾಗಿ ಹೋಗುತ್ತಿದ್ದ.

ಅಧಿಕಾರದ ಸುಖದ ಲಾಲಸೆಯಿಂದ ರಾಜನಾದವ ಐದೂ ವರ್ಷಗಳಲ್ಲಿ ತನ್ನ ಕೊನೆಯ ಬಗ್ಗೆ ಮರೆತು ಹೋಗಿರುತ್ತಿದ್ದ. ಆಗೊಮ್ಮೆ–ಈಗೊಮ್ಮೆ ನೆನಪಾದಂತೆ ಆದರೂ ಸಮಯ ಬಂದಾಗ ನೋಡಿಕೊಳ್ಳೋಣ ಎಂದೋ, ಎಲ್ಲರಿಗಾದದ್ದು ನನಗಾಗದೇ ಇರಬಹುದು ಎಂದುಕೊಂಡೋ ಮತ್ತೆ ತನ್ನ ಸುಖೀ ಜೀವನದಲ್ಲಿ ಕಳೆದು ಹೋಗುತ್ತಿದ್ದ. ಕಡೆಗೆ ಅವಧಿ ಮುಗಿದು ರಾಜ್ಯ ತೊರೆದು ಸಾವಿನ ನಾವೆಯನ್ನು ಏರುವಾಗ ಅವನು ವಾಸ್ತವಕ್ಕೆ ಬರುತ್ತಿದ್ದ, ಆಗವನ ಗೋಳು ಮುಗಿಲು ಮುಟ್ಟುತ್ತಿತ್ತು. ಅಷ್ಟು ಕಾಲ ತನ್ನ ಸುಖದಲ್ಲಿ ಪಾಲುದಾರರಾಗಿದ್ದವರನ್ನು ಹೇಗಾದರೂ ಮಾಡಿ ತಮ್ಮನ್ನು ಉಳಿಸಿಕೊಳ್ಳುವಂತೆ ಅಂಗಲಾಚಿ ಬೇಡಿಕೊಳ್ಳುತ್ತಿದ್ದ. ಕಡೆಯ ಕ್ಷಣದವರೆಗೂ ಯಾವುದಾದರೊಂದು ಪವಾಡ ನಡೆದು, ತಾನು ಪಾರಾಗುತ್ತೇನೆ ಎಂದು ಎದುರು ನೋಡುತ್ತಿದ್ದ. ಕಡೆಗೆ ಹಾಗೇನು ನಡೆಯದೇ ಸಾವಿನ ಮನೆ ಸೇರುತ್ತಿದ್ದ.

ಒಂದು ಸಲ ಹೀಗೇ ಕ್ರಮದಂತೆ ಒಬ್ಬ ಐದು ವರ್ಷಗಳ ರಾಜ್ಯಭಾರ ನಡೆಸಿದ. ತನ್ನ ಅಧಿಕಾರ ಅವಧಿಯಲ್ಲಿ ಪ್ರಜಾಹಿತ ಕಾರ್ಯಗಳಿಗೆ ಆದ್ಯತೆ ನೀಡಿದ. ದೇಶದಲ್ಲಿ ಸುಭಿಕ್ಷ ನೆಲೆಸಿತ್ತು. ಅರಾಜಕತೆಗಳು ಅಡಗಿ ಹೋಗಿದ್ದವು. ಯಾರೂ ಕೆಲಸವಿಲ್ಲದೆ ಹಸಿವಿನಿಂದ ನರಳುವುದು ಕಾಣಬರುತ್ತಿರಲಿಲ್ಲ. ಕಡೆಗೆ ತನ್ನ ಅವಧಿ ಮುಗಿಯಿತು. ಸಕಲ ಸಂಪತ್ತನ್ನು ತೊರೆದು ಎಲ್ಲರಿಂದಲೂ ಬೀಳ್ಕೊಟ್ಟು ಸಾವಿನ ನಾವೆ ಏರಲು ತಯಾರಾದ.

ಇವನನ್ನು ಕಳಿಸಲು ಯಾರಿಗೂ ಮನಸ್ಸಿರಲಿಲ್ಲ. ಆದರೂ ನಡೆದ ಬಂದ ಕ್ರಮದಂತೆ ಎಲ್ಲವೂ ನಡೆಯಿತು. ಯಾವುದೇ ಆತಂಕ ದುಃಖಗಳಿಲ್ಲದೆ ಇವ ನಗು ನಗುತ್ತಾ ನಾವೆ ಏರಿದ. ಇದನ್ನೆಲ್ಲಾ ವೀಕ್ಷಿಸುತ್ತಿದ್ದ ನಾವಿಕನಿಗೆ ತುಂಬಾ ಆಶ್ಚರ್ಯವಾಯಿತು. ಬಹಳಷ್ಟು ರಾಜರನ್ನು ಅವನು ತನ್ನ ಜೀವಿತಾವಧಿಯಲ್ಲಿ ನದಿ ದಾಟಿಸಿದ್ದ. ಆದರೆ, ಇವನಂತೆ ಹಸನ್ಮುಖದಿಂದ ಸ್ವ–ಇಚ್ಛೆಯಿಂದ ಪಯಣಿಸುವವರನ್ನು ಕಂಡಿರಲೇ ಇಲ್ಲ. ನಾವಿಕ ಅದನ್ನೇ ಪ್ರಶ್ನೆ ರೂಪದಿಂದ ರಾಜನ ಮುಂದಿಟ್ಟ. ರಾಜ ನಗುನಗುತ್ತಾ; "ತಾತ ನನ್ನನ್ನು ನದಿಯ ಆಚೆದಟಕ್ಕೆ ಸೇರಿಸುವಾಗ ಬಹುಶಃ ನಿನ್ನ ಪ್ರಶ್ನೆಗೆ ಉತ್ತರ ಸಿಕ್ಕಿಯೇ ಸಿಗುತ್ತದೆ. ಆದರೂ ಈ ಉತ್ತರದಲ್ಲಿ ಬದುಕಿನ ತತ್ವ ಅಡಗಿರುವುದು ನಿನಗೆ ಅರಿವಾಗದೇ ಹೋಗಬಹುದು. ಅದಕ್ಕಾಗಿ ನೀಡುತ್ತೇನೆ" ಕೇಳು ಎಂದ.

"ನನಗೆ ರಾಜನಾಗುವ ಸುಯೋಗ ಸಿಕ್ಕಿದಾಗಲೇ ಅದರ ಅಂತ್ಯದ ಬಗೆಯೂ ಗೊತ್ತಿತ್ತು. ಹಾಗಾಗಿ, ಒಂದು ಕಾರ್ಯ ಯೋಜನೆ ರೂಪಿಸಿದೆ. ಮೊದಲನೆಯದಾಗಿ, ನನ್ನ ಪ್ರಜೆಗಳ ವಿಶ್ವಾಸ ಗಳಿಸಿದೆ. ಆ ವರ್ಷವೇ ಬೇಟೆಗಾರರ ದಳಗಳನ್ನು ಕಳುಹಿಸಿ. ಈ ಕಾಡಿನಲ್ಲಿರುವ ಹಿಂಸೆ ಪ್ರಾಣಿಗಳನ್ನು ನಾಶಪಡಿಸಿದೆ. ಎರಡನೆಯ ವರ್ಷ, ಒಂದು ಭಾಗದಲ್ಲಿ ಕಾಡನ್ನು ನೆಲಸಮಮಾಡಿಸಿ, ನಗರವೊಂದರ ರೂಪುರೇಷೆಗಳನ್ನು ಸಿದ್ಧಪಡಿಸಿದೆ. ಮೂರನೇ ವರ್ಷ, ವಾಸ್ತು ಶಿಲ್ಪಿಗಳ ತಂಡನಗರ ನಿರ್ಮಾಣ ಮಾಡಿತು. ನಾಲ್ಕನೇ ವರ್ಷ, ನನ್ನ ಆಪ್ತ ಪ್ರಜೆಗಳು ಈ ನಗರಕ್ಕೆ ವಲಸೆ ಹೋದರು. ಮಂತ್ರಿಗಳನ್ನು ಯೋಜಿಸಲಾಯಿತು. ವ್ಯಾಪಾರ, ಕೃಷಿಗಳು ಕಾರ್ಯರೂಪಕ್ಕೆ ಬಂದವು. ಐದನೆಯ ವರ್ಷ, ಈ ಸುಂದರ ನಗರದಲ್ಲಿರುವ ಸಮಸ್ತ ಕುಂದು ಕೊರತೆಗಳನ್ನು ಸರಿಪಡಿಸಲಾಯಿತು. ಈಗ ಎಲ್ಲವೂ ಸುವ್ಯವಸ್ಥಿತವಾಗಿರುವ ಅದರ ಒಡೆತನ ವಹಿಸಿಕೊಳ್ಳುವವನಿದ್ದೇನೆ" ಎಂದು ವಿವರವಿತ್ತ ರಾಜ.

ನದಿ ತಟ ಸೇರುವಂತೆ ವಾದ್ಯ ಘೋಷಗಳೊಂದಿಗೆ ಊರಿನ ಮಂದಿ ರಾಜನನ್ನು ಎದುರುಗೊಳ್ಳಲು ಸಿದ್ಧನಾಗಿ ನಿಂತಿರುವುದು ಕಂಡು ಬಂತು. ಆನೆಯ ಮೇಲಿನ ಅಂಬಾರಿಯಲ್ಲಿ ಅವನನ್ನು ಕರೆದೊಯ್ದರೂ ರಾಜ ತಾನೇ ನಿರ್ಮಿಸಿದ ರಾಜ್ಯಕ್ಕೆ ಒಡೆಯನಾಗಿ ಹೊರಟ.

ನಮ್ಮ ಬದುಕನ್ನು ಕಟ್ಟುವುದು ನಾವೇ. ನಾವು ನಡೆದ ಹಾದಿಯನ್ನು ಗುರುತಿಸಬೇಕಾದವರು, ನಡೆವವರು, ಕಡೆಗೆ ಗುರಿ ಮುಟ್ಟಿ ಫಲ ಅನುಭವಿಸುವವರೂ ನಾವೇ, ಹೀಗೆ ದೈವಬಲದ ಸಹಾಯದಿಂದ, ಶರಣಾಗತಿಯಿಂದ ಬದುಕನ್ನು ರೂಪಿಸಬೇಕು. ಬದುಕೆಂದರೆ ಬರೀ ಇಂದಿನದಲ್ಲ. ಇಂದು, ಮುಂದಿನದು ಕಡೆಗೆ ಅದರಾಚೆಯದೂ ಬದುಕೇ. ಏಕೆಂದರೆ ಈ ಬದುಕು ಜೀವದ ಸುದೀರ್ಘ ಯಾತ್ರೆಯಲ್ಲಿನ ಒಂದು ಮಜಲು, ನಿಲ್ದಾಣ ಮಾತ್ರ ಎನ್ನುತ್ತಾರೆ ಬಲ್ಲವರು.

–ಎನ್. ಶ್ರೀನಿವಾಸಯ್ಯ, ಕಿತ್ತಗಾನಹಳ್ಳಿ

# ಶುಭವಿವಾಹ

1. ಸಂಘದ ಸದಸ್ಯೆ ಶ್ರೀಮತಿ ಉಮಾಗೋವಿಂದ್‌ರವರ ಪುತ್ರ **ಚಿ॥ ಕೌಶಿಕ್ ಗೋವಿಂದ್**‌ರವರ ವಿವಾಹವು **ಚಿ॥ಸೌ॥ ಅಕ್ಷತಾ**ರವರೊಂದಿಗೆ ತಾ॥ 20-04-2018ರಂದು ಬೆಂಗಳೂರಿನಲ್ಲಿ ನೆರವೇರಿತು.

2. ಸಂಘದ ಸದಸ್ಯ ಶ್ರೀಯುತ ಆರ್.ಎನ್. ಸ್ವಾಮಿನಾಥನ್ ಮತ್ತು ಶ್ರೀಮತಿ ಮಂಗಳಾರವರ ಸುಪುತ್ರ **ಚಿ॥ ಆರ್.ಎಸ್. ಮಿಥುನ್**‌ರವರ ವಿವಾಹವು ಶ್ರೀಯುತ ಆರ್. ಶ್ರೀನಿವಾಸ್ ಮತ್ತು ಶ್ರೀಮತಿ ಗೌರಮ್ಮನವರ ಸುಪುತ್ರಿ **ಚಿ॥ಸೌ॥ ಎಸ್. ಭಾರ್ಗವಿ**ಯವರೊಂದಿಗೆ ತಾ॥ 26-04-2018ರ ಗುರುವಾರದಂದು ಬೆಂಗಳೂರಿನಲ್ಲಿ ನೆರವೇರಿತು.

3. ಸಂಘದ ಪೋಷಕಿ ಸದಸ್ಯೆ ಶ್ರೀಮತಿ ಕೆ.ಎಲ್. ಶಾಂತಾ ಸುಬ್ರಮಣಿರವರ ಸುಪುತ್ರಿ **ಚಿ॥ಸೌ॥ ಸುಹಾಸಿನಿ**ಯವರ ವಿವಾಹವು ಶ್ರೀಯುತ ಎಸ್. ನಾಗರಾಜರಾವ್ ಮತ್ತು ಶ್ರೀಮತಿ ಆರ್. ಸಾವಿತ್ರಿರವರ ಸುಪುತ್ರ **ಚಿ॥ ಎನ್. ಅಜಯ್**‌ರವರೊಂದಿಗೆ ತಾ॥ 27-04-18ರ ಶುಕ್ರವಾರದಂದು ಬೆಂಗಳೂರಿನಲ್ಲಿ ನೆರವೇರಿತು.

4. ಸಂಘದ ಹಿರಿಯ ಸದಸ್ಯರಾದ ಶ್ರೀಯುತ ರಾಜಣ್ಣ, ಬೂದಿಗೆರೆ ಸುಬ್ಬರಾವ್ ರವರ ಮೊಮ್ಮಗಳು ಹಾಗೂ ಸದಸ್ಯ ಆರ್.ಜಿ. ಪ್ರಸಾದ್ ಮತ್ತು ಶ್ರೀಮತಿ ಸುಜಯಾ ಪ್ರಸಾದ್‌ರವರ ಸುಪುತ್ರಿ **ಚಿ॥ಸೌ॥ ಪೂಜಾ ಪ್ರಸಾದ್**‌ರವರ ವಿವಾಹವು ಶ್ರೀ ಬಿ.ಎಲ್. ನಾಗೇಶ್ ಮತ್ತು ಶ್ರೀಮತಿ ಕೆ.ಎಲ್. ಮಂಜುಳಾರವರ ಸುಪುತ್ರ **ಚಿ॥ ಬಿ.ಎನ್. ವಿನೋದ್‌ಕುಮಾರ್**‌ರವರೊಂದಿಗೆ ತಾ॥ 02-05-2018ರ ಬುಧವಾರದಂದು ಬೆಂಗಳೂರಿನಲ್ಲಿ ನೆರವೇರಿತು.

5. ಆಧ್ಯಾತ್ಮ ಚಿಂತಕಿ ಶ್ರೀಮತಿ ಜಿ.ಪಿ. ಲಕ್ಷ್ಮೀದೇವಿಯವರ ಮೊಮ್ಮಗ **ಚಿ॥ ರಕ್ಷಿತ್** (ಶ್ರೀ ಸೂರ್ಯ ನಾರಾಯಣ್ ಮತ್ತು ಶ್ರೀಮತಿ ಜ್ಯೋತಿಯವರ ಪುತ್ರ) **ಚಿ॥ಸೌ॥ ವಿಭಾ ವಿ. ರಾವ್**‌ರವರ ವಿವಾಹವು ತಾ॥ 07-05-18ರ ಭಾನುವಾರದಂದು ಭದ್ರಾವತಿಯಲ್ಲಿ ನಡೆದು ಆರತಕ್ಷತೆಯು ತಾ॥ 20-05-2018 ರಂದು ಬೆಂಗಳೂರಿನಲ್ಲಿ ನೆರವೇರಿತು.

6. ಸಂಘದ ಸದಸ್ಯ ಶ್ರೀ ಶ್ರೀನಿವಾಸನ್ ಹಾಗೂ ಶ್ರೀಮತಿ ಲತಾ ಶ್ರೀನಿವಾಸನ್‌ರವರ ಸುಪುತ್ರಿ **ಚಿ॥ಸೌ॥ ಮಧುರಾ ಶ್ರೀನಿವಾಸನ್**‌ರವರ ವಿವಾಹವು **ಚಿ॥ ಕಿರಣ್**‌ರವರೊಂದಿಗೆ ತಾ॥ 10-05-2018 ರಂದು ಬೆಂಗಳೂರಿನಲ್ಲಿ ನಡೆಯಿತು.

**ನೂತನ ವಧುವರರಿಗೆ ಸಂಘವು ಶುಭ ಹಾರೈಸುತ್ತದೆ.**

# ಗೃಹಪ್ರವೇಶ

* ಸಂಘದ ಪೋಷಕರಾದ ಶ್ರೀ ಸತ್ಯಪ್ರಸಾದ್ ಹಾಗೂ ಶ್ರೀಮತಿ ನಾಗರತ್ನರವರು ತಾ॥ 13-05-2018ರ ಭಾನುವಾರದಂದು ರಾಜರಾಜೇಶ್ವರಿನಗರದಲ್ಲಿ ತಮ್ಮ ನೂತನ ಗೃಹಪ್ರವೇಶಿಸಿದರು.

* ಸಂಘದ ಹಿರಿಯ ಸದಸ್ಯರಾದ ಶ್ರೀಮತಿ ಮೀನಾಕ್ಷಿ ನಾಗರಾಜ್‌ರವರ ಪುತ್ರ ಸಂಘದ ಸದಸ್ಯ ಶ್ರೀ ನವೀನ್‌ರವರು ತಾ॥ 04-04-2018ರಂದು ಇಟ್ಟಮಡು ಆಂಜನೇಯ ನಗರದಲ್ಲಿ ನೂತನ ಗೃಹಪ್ರವೇಶ ಮಾಡಿದರು.

* ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದ ದಿ॥ ಎಸ್. ಶ್ರೀನಿವಾಸನ್‌ರವರ ಪುತ್ರಿ ಸಂಘದ ಸದಸ್ಯೆ ಶ್ರೀಮತಿ ಶಾರ್ವರಿ ಶ್ರೀನಿವಾಸ್ ತಿಲಕ್‌ರವರು ವಿದ್ಯಾಪೀಠ ಬಡಾವಣೆಯಲ್ಲಿ ತಾ॥ 20-05-2018ರಂದು ನೂತನ ಗೃಹಪ್ರವೇಶಿಸಿದರು. ಇದೇ ಸಂದರ್ಭದಲ್ಲಿ ಶ್ರೀಮತಿ ಶಾರ್ವರಿರವರು ರೂ. 2000/-ಗಳನ್ನು ದೇಣಿಗೆಯಾಗಿ ನೀಡಿದ್ದಾರೆ.

**ಸಂಘವು ಎಲ್ಲಾ ಕುಟುಂಬದವರಿಗೆ ಶುಭ ಕೋರುತ್ತದೆ.**

## ನಮ್ಮನ್ನಗಲಿದ ನಮ್ಮವರು-ಸಂಘದ ಶ್ರದ್ಧಾಂಜಲಿ



* ಬೃಹಚ್ಚರಣ ಸಂಘದ ಮಹಾ ಪೋಷಕಿ, ದಾನಿಗಳಾದ **ಡಾ॥ ಎಸ್.ಕೆ. ವಿಜಯಲಕ್ಷಮ್ಮ** (88) ಸರ್ಜಾಪುರದ ಕೃಷ್ಣ ರಾವ್ ಮತ್ತು ಸರಸ್ವತಮ್ಮನವರ ಪುತ್ರಿ. ಬೆಂಗಳೂರಿನಲ್ಲಿ ವಾಸವಾಗಿದ್ದ ಇವರು ದಿನಾಂಕ 6.6.2018ದಂದು ದೈವಾಧೀನರಾಗಿರುತ್ತಾರೆ.



* ಸಂಘದ ಪೋಷಕ ಸದಸ್ಯರಾದ **ಶ್ರೀ ಎಂ.ಪಿ. ರಂಗನಾಥನ್** (92) 22.6.2018ರಂದು ನಮ್ಮನ್ನಗಲಿರುತ್ತಾರೆ. ತಮ್ಮ ಇಳಿಯ ವಯಸ್ಸಿನಲ್ಲೂ ಸಂಘದ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಿ ಯುವಕರನ್ನು ಹುರಿದುಂಬಿಸುತ್ತಿದ್ದರು. ಬೃಹಚ್ಚರಣ ಪತ್ರಿಕೆಗೆ ಲೇಖಕರಾಗಿದ್ದರು.

* **ಶೋಭಾಮೂರ್ತಿ (ಸುಬ್ಬಲಕ್ಷ್ಮಿ)** 79 ದಿ. ಬಿನ್ನಮಂಗಲ ನಾರಾಯಣಮೂರ್ತಿ ಅವರ ಧರ್ಮಪತ್ನಿ 09-05-2018ರಂದು ನಮ್ಮನ್ನಗಲಿದ್ದಾರೆ.

* ಸಂಘದ ಹಿತೈಷಿಗಳಾದ ಶ್ರೀ ವೇ॥ ಬ್ರ. ನಂಜುಂಡ ದೀಕ್ಷಿತರ ಸೋದರಿ **ಸಂಧ್ಯ**ರವರು 25.05.2018ರಂದು ನಮ್ಮನ್ನಗಲಿರುತ್ತಾರೆ.

# ಮಕ್ಕಳಿಗಾಗಿ ಲೆಕ್ಕಗಳು

**ಬಿ.ಈ.ಗೋವಿಂದ್**

(1) ಒಂದು ನೀರಿನ ಟ್ಯಾಂಕನ್ನು ತುಂಬಲು ಅದಕ್ಕಿರುವ ನಲ್ಲಿಗೆ 3 ಗಂಟೆಗಳು ಬೇಕು. ಆ ಟ್ಯಾಂಕಿಗೆ ನೀರನ್ನು ಹೊರಬಿಡಲು ಮತ್ತೊಂದು ನಲ್ಲಿ ಇದ್ದು ಟ್ಯಾಂಕನ್ನು ಖಾಲಿ ಮಾಡಲು ಅದಕ್ಕೆ 5 ಗಂಟೆಗಳು ಬೇಕು. ಪೂರ್ತಿ ಖಾಲಿ ಇರುವಾಗ ಆ ಟ್ಯಾಂಕಿನ ಒಳನಲ್ಲಿ ಮತ್ತು ಹೊರನಲ್ಲಿ ಎರಡನ್ನೂ ಒಟ್ಟಿಗೆ ತೆರೆದರೆ, ಟ್ಯಾಂಕು ಎಷ್ಟು ಸಮಯದದಲ್ಲಿ ತುಂಬುತ್ತದೆ ?

(2) ಒಂದು ಕೊಠಡಿಯು 12 ಅಡಿ ಉದ್ದ, 10 ಅಡಿ ಅಗಲ ಮತ್ತು 10 ಅಡಿ ಎತ್ತರವಿದೆ. ಅದರಲ್ಲಿ 1 ಅಡಿ ಉದ್ದ, 1 ಅಡಿ ಅಗಲ ಮತ್ತು 1/2 ಅಡಿ ಎತ್ತರವಿರುವ ಡಬ್ಬಗಳನ್ನು ಜೋಡಿಸಬೇಕಾಗಿದೆ. ಕೋಣೆಯಲ್ಲಿ ಓಡಾಡಲು ಸುತ್ತಲೂ ಒಂದು ಅಡಿ ಜಾಗವನ್ನು ಬಿಡಬೇಕು ಮತ್ತು ಕೋಣೆಯ ಎತ್ತರದ ಮುಕ್ಕಾಲು ಭಾಗದಷ್ಟು ಎತ್ತರ ಮಾತ್ರ ಡಬ್ಬಗಳನ್ನು ಜೋಡಿಸಬಹುದು. ಹಾಗಿದ್ದರೆ, ಆ ಕೋಣೆಯಲ್ಲಿ ಎಷ್ಟು ಡಬ್ಬಗಳನ್ನು ಜೋಡಿಸಬಹುದು.

(3) ಒಬ್ಬ ದರ್ಜಿಯು 1200 ಮೀಟರ್ ಬಟ್ಟೆಯನ್ನು ಕೊಂಡುಕೊಂಡು ಅದನ್ನು 3 ಸಮ ಭಾಗ ಮಾಡುವನು. ಮೊದಲನೆಯ ಭಾಗದಿಂದ ಮಕ್ಕಳ ಅಂಗಿಯನ್ನೂ ಎರಡನೆಯ ಭಾಗದಿಂದ ಹುಡುಗರ ಅಂಗಿಯನ್ನೂ ಮತ್ತು ಮೂರನೆಯ ಭಾಗದಿಂದ ದೊಡ್ಡವರ ಅಂಗಿಯನ್ನೂ ಹೊಲೆಯುವನು. ಮಕ್ಕಳ ಅಂಗಿಗೆ 0.8 ಮೀಟರ್ ಬಟ್ಟೆಯೂ, ಹುಡುಗರ ಅಂಗಿಗೆ 1.25 ಮೀಟರ್ ಬಟ್ಟೆಯೂ ಮತ್ತು ದೊಡ್ಡವರ ಅಂಗಿಗೆ 2 ಮೀಟರ್ ಬಟ್ಟೆಯೂ ಬೇಕಾದರೆ , ದರ್ಜಿಯು ಒಟ್ಟು ಎಷ್ಟು ಅಂಗಿಗಳನ್ನು ಹೊಲಿಯುತ್ತಾನೆ ? ಅವನಿಗೆ ಈ ಅಂಗಿಗಳಿಂದ ದೊರೆಯುವ ಲಾಭ, ಪ್ರತಿ ಮಕ್ಕಳ ಅಂಗಿಗೆ 40 ರೂಪಾಯಿ, ಹುಡುಗರ ಅಂಗಿಗೆ 60 ರೂಪಾಯಿ ಮತ್ತು ದೊಡ್ಡವರ ಅಂಗಿಗೆ 80 ರೂಪಾಯಿಗಳಾದರೆ, ಅವನಿಗೆ ದೊರೆಯುವ ಒಟ್ಟು ಲಾಭವೆಷ್ಟು ?

(4) ಒಂದು ತರಗತಿಯಲ್ಲಿ 40% ವಿಧ್ಯಾರ್ಥಿಗಳು ಕ್ರಿಕೆಟ್ ಆಡುತ್ತಿದ್ದರು. 25% ವಿಧ್ಯಾರ್ಥಿಗಳು ಹಾಕಿ ಆಡುತ್ತಿದ್ದರು ಮತ್ತು 20% ವಿಧ್ಯಾರ್ಥಿಗಳು ಎರಡು ಆಟಗಳನ್ನೂ ಆಡುತ್ತಿದ್ದರು. ಹಾಗಾದರೆ, ಈ ಎರಡರಲ್ಲಿ ಯಾವ ಆಟವನ್ನೂ ಆಡುತ್ತಿರದಿದ್ದವರು ಎಷ್ಟು ವಿಧ್ಯಾರ್ಥಿಗಳು ?

(5) ಅಶೋಕನ ಬಳಿಯಲ್ಲಿ ಒಂದು ಗೋಲಕವಿತ್ತು. ಅವನು ಅದರಲ್ಲಿ ಒಂದು ರೂಪಾಯಿಯ, ಐದು ರೂಪಾಯಿಯ ಮತ್ತು ಹತ್ತು ರೂಪಾಯಿಯ ನಾಣ್ಯಗಳನ್ನು ಸಂಗ್ರಹಿಸುತ್ತಿದ್ದನು. ಒಂದು ವರ್ಷದ ನಂತರ ಅಶೋಕನು ಗೋಲಕವನ್ನು ತೆರೆದು ಅದರಲ್ಲಿರುವ ಹಣವನ್ನು ಎಣಿಸಿದಾಗ ಅದು ಒಟ್ಟು ಎಂಟು ನೂರು ರುಪಾಯಿಗಳು ಇದ್ದವು. ಸಂಖ್ಯೆಯಲ್ಲಿ ಹತ್ತು ರೂಪಾಯಿಯ ನಾಣ್ಯಗಳು ಎಷ್ಟು ಇದ್ದವೋ ಅದರ ಒಂದೂವರೆಯಷ್ಟು ಐದು ರೂಪಾಯಿಯ ನಾಣ್ಯಗಳು ಹಾಗೂ ಎರಡೂವರೆಯಷ್ಟು ಒಂದು ರೂಪಾಯಿಯ ನಾಣ್ಯಗಳು ಇದ್ದವು. ಹಾಗಾದರೆ ಗೋಲಕದಲ್ಲಿ ಯಾವ ಯಾವ ನಾಣ್ಯಗಳು ಎಷ್ಟೆಷ್ಟು ಇದ್ದವು ?

**ಸರಿ ಉತ್ತರಗಳು :- ಮುಂದಿನ ಸಂಚಿಕೆಯಲ್ಲಿ**

# ವಾರ್ತಾಚಿತ್ರ



ಸಂಘದ ಸದಸ್ಯೆ ಶ್ರೀಮತಿ ಲೀಲಾವತಿ ಗುಂಡಪ್ಪ ಮತ್ತು ಪೋಷಕ ಶ್ರೀ ಗುಂಡಪ್ಪನವರ ಮೊಮ್ಮಗಳು ಹಾಗೂ ಶ್ರೀಮತಿ ಪಲ್ಲವಿ ಗುರುಪ್ರಸನ್ನ ಮತ್ತು ಲಯವಾದ್ಯ ಕಲಾವಿದ ಶ್ರೀ ಗುರುಪ್ರಸನ್ನರವರ ಪುತ್ರಿ ಚಿ. ಪ್ರಣವಿಯವರು ಬಸವೇಶ್ವರನಗರದ ಶ್ರೀವಾಣಿ ವಿದ್ಯಾಕೇಂದ್ರದ ರಾಮೋತ್ಸವ ಸಂದರ್ಭದಲ್ಲಿ ವಯೋಲಿನ ವಾದ್ಯ ಕಛೇರಿ ನೀಡಿದ ಸಂದರ್ಭ.



ಸಂಘದ ಪೋಷಕರಾದ ಶ್ರೀ ಮುತ್ತುಸ್ವಾಮಿಯವರ ಮೊಮ್ಮಗ ಹಾಗೂ ಸದಸ್ಯೆ ಮೇಘ ಸುಮಂತ್‌ರವರ ಪುತ್ರ ಚಿ. ಅಭಯ್‌ರವರು ಬ್ಯಾಂಕಾಕ್‌ನಲ್ಲಿ ಸಮೂಹ ವಾದ್ಯವೃಂದದಲ್ಲಿ ಭಾಗವಹಿಸಿದ ಸಂದರ್ಭ.




ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ವಿ. ಸುನಿಲ್‌ರವರು ಎ.ಎಂ.ಸಿ. ವಿದ್ಯಾಸಂಸ್ಥೆಯ ವಾರ್ಷಿಕೋತ್ಸವದಲ್ಲಿ ಕ್ರಿಕೆಟ್ ಮತ್ತು ಟೇಬಲ್ ಟೆನ್ನಿಸ್ ಪಂದ್ಯಗಳಲ್ಲಿ ಪ್ರಶಸ್ತಿ ಪಡೆದ ಸಂದರ್ಭ.



**ಸಹಸ್ರಚಂದ್ರದರ್ಶನ**

ಸಂಘದ ಸದಸ್ಯ ಶ್ರೀ ನಿರಂಜನ್‌ರವರ ತಂದೆಯವರಾದ ಶ್ರೀ ಬಿ.ಎಸ್. ಶ್ರೀನಿವಾಸ್ ರವರ 80ನೇ ವರ್ಷದ ಪ್ರಯುಕ್ತ ಸಹಸ್ರ ಚಂದ್ರದರ್ಶನ ಸಮಾರಂಭವು ದಿನಾಂಕ 28.04.2018ರ ಭಾನುವಾರದಂದು ಬೆಂಗಳೂರಿನಲ್ಲಿ ನೆರವೇರಿತು.

# ಶುಭಾಶಯಗಳು



ಸಂಘದ ಹಿರಿಯ ಸದಸ್ಯ ಶ್ರೀ ಆರ್.ಎಸ್. ರಮೇಶ್‌ರವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಜನರಲ್ ಮ್ಯಾನೇಜರ್ ಆಗಿ ಬಡ್ತಿ ಪಡೆದಿರುತ್ತಾರೆ.



ಸಂಘದ ಪೋಷಕ ಸದಸ್ಯ ಶ್ರೀ ಆರ್.ಎಸ್. ವೆಂಕಟೇಶ್‌ರವರು ಕೆನರಾ ಬ್ಯಾಂಕಿನ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಆಗಿ ಬಡ್ತಿ ಪಡೆದಿರುತ್ತಾರೆ.

# ಶತಾಯುಷ್ಟರ ಜೀವನ ಸಂಧ್ಯಾ

ಬೃಹಚ್ಚರಣ ಸಮುದಾಯದಲ್ಲಿ ಅತ್ಯಂತ ಹಿರಿಯರಾದ ಶ್ರೀ ಬಿ.ಎನ್. ಶ್ರೀನಿವಾಸಯ್ಯನವರು ಇದೀಗ 102ನೇ ವರ್ಷಕ್ಕೆ ಹೆಜ್ಜೆ ಹಾಕಿದ್ದಾರೆ. ಅವರ ಹೆಜ್ಜೆಗಳಿಗೆ ನಮ್ಮಯ 100+1 ಮಲ್ಲಿಗೆ ಹೂವುಗಳನ್ನು ಸೇರಿಸುವ ಸಮಾರಂಭವು ಅವರ ಸ್ವಗೃಹದಲ್ಲಿ ದಿನಾಂಕ 03.06.2018ರಂದು ನಡೆದುದು ವಿಶದ ವಿಶೇಷ.

ಶ್ರೀಯುತರು ಅಲಸೂರು ನಾರಾಣಪ್ಪ ಮತ್ತು ಸಾವಿತ್ರಮ್ಮರವರಿಗೆ ದ್ವಿತೀಯ ಪುತ್ರ. ಈಗ ಮಗಳು ವಸುಂಧರಾ ಮತ್ತು ಸೊಸೆ ಶಶಿಕಲಾ ಅವರ ಜೀವನಕ್ಕೆ ಒಡನಾಡಿಗಳು.



ಇಂದು "ನೀವು ಏನು ಕೆಲಸ ಮಾಡುತ್ತಿದ್ದಿರೀ?" ಎಂದು ಪ್ರಶ್ನಿಸಿದಾಗ ಅವರು ತಮ್ಮ ಎಂದಿನ ಗಟ್ಟಿ ದನಿಯಲ್ಲಿ ಸುಮಾರು ಐದು ವರುಷಗಳು ಭಾರತ ಭೂಸೇನಾ ವಿಭಾಗ, ನಂತರ ಭಾರತ ಸರ್ಕಾರದ ಹಯನು ಉದ್ದಿಮೆ ಅಂದರೆ ಡೈರಿಯಲ್ಲಿ ಅಪರಿಪೂರ್ಣ ಸೇವೆ. ನಿವೃತ್ತಿಯ ನಂತರ ಬೆಂಗಳೂರು ಸಮೀಪದ ಬೈಯ್ಯಪ್ಪನ ಹಳ್ಳಿಯಲ್ಲಿ ಶಾನುಭೋಗನಾಗಿ ಕೆಲಸ ಮಾಡಿರುವ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡರು.

ವಯಸ್ಸಿನ ಅನುಗುಣವಾಗಿ ಕಿವಿಯು ಅಸಮರ್ಪಕವಾಗಿದ್ದರೂ ಮಾತುಕತೆಯಾಡುವಾಗ ಈಗಲೂ ಹಿಂದಿನ ನಗೆಚಾಟಿ, ಪೆರಿಚರಣದ ಭಾಷೆ. ಈಗಲೂ ಕಣ್ಣು ಚೆನ್ನಾಗಿ ಕಾಣುತ್ತಿದೆ.

ಓಹ್! ಅವರ ನೆನಪಿನ ಶಕ್ತಿ ಅಪಾರ. ಅನೇಕ ಹಿಂದಿನ ಬೃಹತ್‌ಚರಣದ ನೆನಪುಗಳ ಪಳೆಯುಳಿಕೆಗಳು ನಿರಂತರವಾಗಿ ಅವರ ಮಾತಿನಲ್ಲಿ ಕಂಡುಬರುತಿತ್ತು. ಹಲವಾರು ಸಂಬಂಧದ ಸುಳಿಗಳು ಅವರ ಆಲೋಚನೆಯಲ್ಲಿ ಹರಿದಾಡಿದವು.

ಅವರ ಈ ಶತವರುಷಗಳು ಮೀರಿದ ಸಾರ್ಥಕ ಜೀವನಕ್ಕೆ ಮಂಜಪತ್ತೂರು ಬೃಹಚ್ಚರಣ ಮಂಡಳಿ ಗೌರವಾರ್ಪಣೆಯಾಗಿ ಸಮುದಾಯಕ್ಕೆ ಋಣ ಸಂದಾಯ ಮಾಡಿದೆ.

ಕರುಣಾಳು ಭಗವಂತನು ಇವರನ್ನು ಇನ್ನೂ ಬಹುದಿನಗಳು ನಮ್ಮೊಂದಿಗೆ ಇರುವಂತೆ ಮಾಡಲೆಂಬುದೆ ನಮ್ಮಯ ಮಹಾದಾಶಯ.

ಶುಭಂ ಭೂಯಾತ್

**ಜಿ.ಎಸ್. ಸತ್ಯಮೂರ್ತಿ**

9844469581

## ಜನನ

* ಸಂಘದ ಸ್ಥಾಪಕ ಸದಸ್ಯರಾದ ಶ್ರೀ ಬಿ.ಎಸ್. ಪದ್ಮನಾಭ್‌ರವರ ಪುತ್ರ ಹಾಗೂ ಶ್ರೀ ಬಿ.ಪಿ. ಶ್ರೀನಿವಾಸ ಮೂರ್ತಿಯವರ ಮಗಳು ಶ್ರೀಮತಿ ಕೃತಿಯವರಿಗೆ 23.5.2018ರಂದು ಗಂಡು ಮಗು ವಿದೇಶದಲ್ಲಿ ಜನನವಾಗಿದೆ.

* ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಟಿ.ಎಸ್. ರಮೇಶನ್ ರವರ ಮಗಳು ಶ್ರೀಮತಿ ಶೃತಿ ಅಭಿನವ್ ಅವರಿಗೆ ಗಂಡು ಮಗು ವಿದೇಶದಲ್ಲಿ ಜನನವಾಗಿದೆ.

**ನೂತನ ಶಿಶುಗಳಿಗೆ ಸಂಘದ ಶುಭ ಹಾರೈಕೆ**

ಸಂಘಕ್ಕೆ ನೂತನ ಸದಸ್ಯೆ
ಶ್ರೀಮತಿ ವಸುಂಧರಾ ಶ್ರೀನಿವಾಸ್
ಬಿ.ಟಿ.ಎಂ. ಲೇಔಟ್, ಬೆಂಗಳೂರು

## ಓದುಗರ ಪತ್ರಗಳಿಗೆ ಉತ್ತರ

ಮಾತೃಶ್ರೀ ಸಮಾನರಾದ ಲಲಿತಮ್ಮ ಚಂದ್ರಶೇಖರರವರಿಗೆ ನಮಸ್ಕಾರ. ಸಂಘದ ಪ್ರವಾಸದ ಬಗ್ಗೆ ವಿವರಗಳನ್ನೊಳಗೊಂಡ ತಾ॥ 23-04-2018ರ ಪತ್ರವು ಅಧ್ಯಕ್ಷ ಶ್ರೀ ಸೋಮಸುಂದರರವರ ಮೂಲಕ ತಲುಪಿದೆ. ಪ್ರವಾಸದ ಬಗ್ಗೆ ತಮಗಿರುವ ಆಸಕ್ತಿ, ಕಾಳಜಿ, ನಿರೂಪಣೆ ಅಮೋಘವಾದುದು. ತಾವು ಸಂಘವು ನವೆಂಬರ್‌ನಲ್ಲಿ ಏರ್ಪಡಿಸಿದ್ದ ಪ್ರವಾಸದ ಕಥನವನ್ನು ಎಳೆಎಳೆಯಾಗಿ ಬಿಡಿಸಿ ಸಾಹಿತ್ಯಕವಾಗಿ ಬರೆದಿರುವುದು ಶ್ಲಾಘನೀಯ.

ಸಂಘದ ಮೇಲಿರುವ ತಮ್ಮ ಕಾಳಜಿಗೆ ಧನ್ಯವಾದಗಳು.

–ಸಂಪಾದಕ

*If un Delivered please return to :*
*President* **'Bruhacharana Sangha'**
No. 8, 3rd Cross, Annaiyyappa Block,
Kumarapark West, Bengaluru-560 020.

Published by Sri S. Somasundara, President, 'BRUHACHARANA SANGHA'
No. 8, 3rd Cross, Annaiyyappa Block, Kumarapark West, Bengaluru-560 020.
Printed at Keerthi Printers, Omkara, 240-F, 2nd D Cross, 2nd 'B' Main, Girinagar 1st Phase, Bengaluru - 560 085, 080-26722034